CC-O. In Public Domain. Digitized by eGangotri

ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು



ಡಾ|| ಟಿ. ಎನ್. ಮಂಜುನಾಥ್

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಡಲ ಪಂಚಾಯಿತಿ

ಮತ್ತು

ಜಿಲ್ಲಾ ಪರಿಷತ್ತು

A. SUBRAHMANYA SHASTRY
Photo and Book seller,
Bharathi Street,
SRINGERI - KADUR

ಲೇಖಕರು

ಡಾ|| ಟಿ. ಎನ್. ಮಂಜುನಾಥ್

Sri Vidyabharathi Book Centre, Sringeri

Mandala Panchayati Mattu Jilla Parishat : by Dr. T. N. Manjunath Assistant Medical Officer, Community Medicine, Vellore. Published by T. R. Nagappa, 2904, Chamundipuram, Mysore-570004 Pages : 48, Price Rs. 5-00. First Edition 1986, Second Revised Edition 1986.

CC-O. In Public Domain. Digitized by eGangotri

ಕಾಪಿರೈಟ್ © ಟಿ. ಎನ್. ಮಂಜುನಾಥ್

ಬೆಲೆ: ಐದು ರೂಪಾಯಿಗಳು

ಮುನ್ನುಡಿ

ಕರ್ನಾಟಕ ಸರಕಾರ ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ತಿದ್ದುಪಡಿಯನ್ನು ಸಂವಿಧಾನಕ್ಕೆ ಅಳವಡಿಸಿ ಒಂದು ಕ್ರಾಂತಿಯನ್ನೇ ತಂದಿದೆ. ಇದರಿಂದ ದೇಶದಲ್ಲಿ ಗ್ರಾಮಸ್ವರಾಜ್ಯ ಸ್ಥಾಪನೆಯಾಗಿ ಸುಖೀರಾಜ್ಯವಾದೀತೆಂದು ಪರಿಗಣಿಸಲಾಗಿವೆ. ಸರಕಾರ ಯೋಜಿಸಿರುವಂತೆ ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥಿತವಾಗಿ, ಕ್ರಮವಾಗಿ ನಡೆದರೆ ಖಂಡಿತ ಗ್ರಾಮಸ್ವರಾಜ್ಯ ಸ್ಥಾಪನೆಯಾದೀತು.

ಈ ಮಸೂದೆಯನ್ನು ರಚಿಸಿ ಅದರ ಆಗುಹೋಗನ್ನು ದೇಶದ ಜನತೆಯೊಡನೆ ಚರ್ಚಿಸಿ ತೀರ್ಮಾನ ಕೈಕೊಂಡ ಕೀರ್ತಿ ಸನ್ಮಾನ್ಯ ಗ್ರಾಮ ಪುನರುಜ್ಜೀವನ ಮಂತ್ರಿ ನಸೀರ್‌ಸಾಬ್‌ರವರಿಗೆ ಸೇರಿದ್ದು.

ಈ ಮಸೂದೆಯನ್ನು ಜನಪ್ರಿಯವಾಗಿ ಜನಸಾಮಾನ್ಯರು ಅರಿತುಕೊಂಡು ಕಾರ್ಯ ನಡೆಸುವಂತಾಗಲು ಡಾ॥ ಟಿ. ಎನ್. ಮಂಜುನಾಥ್ ಶ್ರಮಪಟ್ಟಿದ್ದಾರೆ. ಈ ಪುಸ್ತಕವನ್ನು ಸರಳವಾಗಿ ಯಾವ ಭಾಗವನ್ನೂ ಬಿಡದೆ ವಿವರಿಸಿದ್ದಾರೆ. ಈ ಪುಸ್ತಕ ಜನರ ಕೈಸೇರಿ ಈ ಮಸೂದೆಯ ವಿಷಯದ ಜ್ಞಾನ ಹೆಚ್ಚಿ ಉಪಯೋಗವಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಲೆಂದು ಹಾರೈಸಿ ಡಾ॥ ಟಿ. ಎನ್. ಮಂಜುನಾಥ್‌ರನ್ನು ಅಭಿನಂದಿಸುತ್ತೇನೆ.

ನ. ಭದ್ರಯ್ಯ
ಮಾಜಿ ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಯೂನೆಸ್ಕೊ ವಯಸ್ಕರ ಶಿಕ್ಷಣತಜ್ಞ
ಮೈಸೂರು

ಮುದ್ರಕರು : ಜಿ. ಎಸ್. ನಾಗೇಂದ್ರ, ಕರ್ನಾಟಕ ಪ್ರೆಸ್, ಮೈಸೂರು ೫೭೦೦೦೪

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಚಾಯಿತಿರಾಜ್ಯ

ರಂಗೇನಹಳ್ಳಿಯಲ್ಲಿ ಒಂದು ವಿದ್ಯಾಮಂದಿರ

ರಂಗೇನಹಳ್ಳಿಯಲ್ಲಿ ಒಂದು ರಾತ್ರಿಶಾಲೆ. ಶಾಲೆಗೆ ಸೇರಿದ್ದು ಮೂವತ್ತು ಮಂದಿ ವಯಸ್ಕರು. ಅವರ ಪೈಕಿ ಚೆನ್ನಾಗಿ ಓದು ಬರಹ ಕಲಿತವರು ಹದಿನೈದು ಮಂದಿ. ಶಾಲೆಯ ಯಶಸ್ಸಿಗೆ ಗ್ರಾಮಸ್ಥರ ಸಹಕಾರ ಚೆನ್ನಾಗಿತ್ತು. ಉಪಾಧ್ಯಾಯರಿಗೆ ನೆರವು ನೀಡಲು ಗ್ರಾಮಸ್ಥರ ಒಂದು ಸಲಹಾ ಸಮಿತಿ ರಚನೆ ಆಗಿತ್ತು.

ಓದು ಬರಹ ಕಲಿತವರು ತಮ್ಮ ಕಲಿಕೆ ಮುಂದುವರಿಸಲು ಆಸೆ ಪಟ್ಟರು. ಅದಕ್ಕಾಗಿ ಅಲ್ಲಿ ಒಂದು ವಿದ್ಯಾಮಂದಿರ ಪ್ರಾರಂಭವಾಯಿತು. ವಯಸ್ಕರ ಶಿಕ್ಷಣ ಇಲಾಖೆ ವಿದ್ಯಾಮಂದಿರಕ್ಕೆ ಒಂದು ಕಟ್ಟು ಪುಸ್ತಕ ನೀಡಿತು.

ಕಲಿತವರು ಅವರ ಪೈಕಿ ಒಂದು ಸಣ್ಣ ಸಮಿತಿ ರಚಿಸಿಕೊಂಡಿದ್ದರು. ಪ್ರತಿನಿತ್ಯ ಸಂಜೆ ಅವರು ಊರ ಚಾವಡಿಯಲ್ಲಿ ಸೇರುವರು. ಅವರ ಜೊತೆಗೆ ಇತರ ಗ್ರಾಮಸ್ಥರು ಕೂಡ ಸೇರುವರು. ಯಾರೂ ಸುಮ್ಮನೆ ಕಾಲ ಕಳೆಯಲು ಇಷ್ಟಪಡರು.

ಪ್ರತಿನಿತ್ಯ ವಿದ್ಯಾಮಂದಿರ ಸೇರಲು ಹತ್ತು ನಿಮಿಷ ಮುಂಚೆ ಚಾವಡಿಯ ಬಳಿ ಬಂದು ಒಳಗೆ ಕಸ ಗುಡಿಸುವರು. ನೆಲಕ್ಕೆ ಚಾಪೆ ಹಾಸುವುದು, ದೀಪ ಹಚ್ಚುವುದು, ಇವೆಲ್ಲಾ ಕಲಿಯುವವರ ಸಮಿತಿ ಸದಸ್ಯರ ಕೆಲಸ. ಈ ಏರ್ಪಾಡು ಇತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಲೆಗಳಿಗೆ ಮಾದರಿ.

ಇಂದು ಶನಿವಾರ. ಎಂದಿನಂತೆ ಎಲ್ಲರೂ ಸೇರಿದ್ದಾರೆ. ಭಜನೆ ಮುಗಿಯಿತು. ಉಪಾಧ್ಯಾಯರು ಅಂದಿನ ವೃತ್ತಪತ್ರಿಕೆ ಓದಿ ಹೇಳಿದರು.

"ಸರಕಾರ ನಮ್ಮದು, ನಮ್ಮದು ರಾಮರಾಜ್ಯ ಆಗ ಬೇಕು ಎಂದು ಮಂತ್ರಿಗಳು ಮೊನ್ನೆ ಸಭೆಯಲ್ಲಿ ಹೇಳಿದರು. ಅದು ಹೇಗೆ ?" ರಂಗಪ್ಪ ಕೇಳಿದ. ರಂಗಪ್ಪ ರಾತ್ರಿಶಾಲೆಯಲ್ಲಿ ಕಲಿತವನು. ಇತರರೂ ಆತನೊಂದಿಗೆ ದನಿಗೂಡಿಸಿದರು. ಕಾರಣ, ಈ ವಿಚಾರ ತಿಳಿಯಲು ಅವರಿಗೂ ಕುತೂಹಲ.

ಉಪಾಧ್ಯಾಯರು : "ನಿನ್ನ ಪ್ರಶ್ನೆ ಒಳ್ಳೆಯದು. ಈ ಪ್ರಶ್ನೆಗೆ ಒಂದೇ ಮಾತಿನಲ್ಲಿ ಉತ್ತರ ಹೇಳಲು ಆಗದು. ಆದ್ದರಿಂದ ಈ ವಿಚಾರ ವಿವರವಾಗಿ ಹೇಳುವೆ. ಎಲ್ಲರಿಗೂ ಈ ವಿಷಯ ತಿಳಿಯಲು ಆಸೆ ಅಲ್ಲವೆ ?"

"ಹೌದು" "ಹೌದು" ಎಂಬ ಕೂಗು ಸಭೆಯಿಂದ ಕೇಳಿ ಬಂತು.

ನಮ್ಮ ದೇಶ ಸ್ವಾತಂತ್ರ್ಯ ಪಡೆದಿದ್ದು ಹೇಗೆ ?

ನಮ್ಮ ದೇಶ ಭಾರತ. ನಾವು 1947 ರ ಆಗಸ್ಟ್ ಹದಿನೈದ ರಂದು ಸ್ವಾತಂತ್ರ್ಯ ಪಡೆದೆವು. ಸ್ವಾತಂತ್ರ್ಯ ಪಡೆಯಲು ಸುಮಾರು ನೂರು ವರ್ಷ ಹೋರಾಡಿದೆವು. ಅದೇ ಒಂದು ರೋಮಾಂಚಕಾರಿ ಕಥೆ. ಇಂದು ನಾವೇ ಸರಕಾರದ ಒಡೆ ಯರು. ಅದಿರಲಿ, ಈಗ ಸ್ವಾತಂತ್ರ್ಯ ಪಡೆದ ಬಗೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿಯೋಣ.

ಈಗ ಸುಮಾರು ಐನೂರು ವರ್ಷಗಳ ಹಿಂದಕ್ಕೆ ಹೋಗೋಣ. ಆಗ ಯೂರೋಪಿನ ಹಲವಾರು ದೇಶಗಳು ಭಾರತದೊಡನೆ ವ್ಯಾಪಾರ ಮಾಡಲು ಬಯಸಿದವು. ಮೊದಲು ನಮ್ಮ ದೇಶಕ್ಕೆ ವ್ಯಾಪಾರಕ್ಕೆ ಬಂದವರು ಪೋರ್ಚುಗೀಸರು. ಅನಂತರ ಬಂದವರು ಡಚ್ಚರು. ಹದಿನಾರನೆಯ ಶತಮಾನದಲ್ಲಿ ಬ್ರಿಟನ್ನಿನ ವರ್ತಕರು ಭಾರತಕ್ಕೆ ಬಂದರು. ಮೊಗಲ್ ಚಕ್ರವರ್ತಿ ಜಹಾಂಗೀರನನ್ನು ಭೇಟಿ ಮಾಡಿದರು. ತಮ್ಮ ವ್ಯಾಪಾರಕ್ಕೆ ಅನುಕೂಲ ಮಾಡಿಕೊಂಡುವಂತೆ ಆ ಚಕ್ರವರ್ತಿಯನ್ನು ಬೇಡಿಕೊಂಡರು. ವ್ಯಾಪಾರದ ಸೋಗಿನಲ್ಲಿ ಬಂದವರು ಕ್ರಮೇಣ ತಮ್ಮ ಪ್ರಭಾವ ಬೆಳಸಿಕೊಂಡರು. ಇಲ್ಲಿ ಸಾಮ್ರಾಜ್ಯವನ್ನು ಕಟ್ಟಿದರು. ಭಾರತದಲ್ಲಿ ಬಹುಕಾಲ ನಿಂತವರು ಬ್ರಿಟಿಷರು. ಅವರ ದೇಶ ಬ್ರಿಟನ್. ಬ್ರಿಟಿಷರನ್ನು ಇಂಗ್ಲಿಷರು ಎಂದು ಕರೆಯುವುದು ರೂಢಿ. ಅವರ ಹತೋಟಿಗೆ ಭಾರತದ ಬಹುಭಾಗ ಸೇರಿತು. ಇಲ್ಲಿನ ಕಬ್ಬಿಣ, ಬಂಗಾರ, ಬೆಳ್ಳಿ, ಹತ್ತಿ ಮುಂತಾದ ಪದಾರ್ಥಗಳನ್ನು ತಮ್ಮ ದೇಶಕ್ಕೆ ಒಯ್ದರು. ಇಲ್ಲಿಯ ಹತ್ತಿ ಬ್ರಿಟನ್ನಿಗೆ ಹೋಗಿ ಬಟ್ಟೆ ರೂಪದಲ್ಲಿ ವಾಪಸು ಬರುತ್ತಿತ್ತು. ಅದಕ್ಕೆ ನಾವು ಹೆಚ್ಚಿನ ಬೆಲೆ ತೆರುತ್ತಿದ್ದೆವು. ಪ್ರಪಂಚದ ಮೊದಲನೆಯ ಮಹಾಯುದ್ಧ ನಡೆಯಿತಷ್ಟೆ. ಆಗ ನಮ್ಮ ಸೈನಿಕರು ಬ್ರಿಟಿಷರಿಗಾಗಿ ಯುದ್ಧ ಮಾಡಿದರು. ಭಾರತದ ಕೋಟ್ಯಾಂತರ ರೂಪಾಯಿ ಯುದ್ಧಕ್ಕೆ ಹರಿಯಿತು. ಅಲ್ಲಿಗೇ ಮುಗಿಯಲ್ಲಿಲ್ಲ. ಪ್ರಪಂಚದ ಎರಡನೆಯ

Sri Vidyabharathi Book Centre, Sringeri

CC-O. In Public Domain. Digitized by eGangotri
ಮಹಾಯುದ್ಧದಲ್ಲೂ ನಮ್ಮ ಸೈನಿಕರು ಹೋರಾಡಿದರು. ಆಗ ಬ್ರಿಟಿಷರಿಗೆ ಬರ್ಮ ದೇಶದಲ್ಲಿ ಸೋಲಾಯಿತು. ಆಗ ಭಾರತೀಯ ಸೈನಿಕರನ್ನು ಅಲ್ಲಿಯೇ ಬಿಟ್ಟು ಓಡಿದರು.

ಭಾರತೀಯರ ಬಾವುಟ ಇಂಗ್ಲಿಷರ 'ಯೂನಿಯನ್ ಜಾಕ್' ಆಗಿತ್ತು. ಭಾರತೀಯರ ರಾಷ್ಟ್ರಗೀತೆ ಇಂಗ್ಲಿಷರ 'ಗಾಡ್ ಸೇವ್ ದಿ ಕಿಂಗ್'. ನಾವು ನಮ್ಮ ದೇಶ ಎಂದು ಹೇಳು ವುದು ಅಪರಾಧ ಆಯಿತು. ಬ್ರಿಟಿಷರನ್ನು ದೇಶ ಬಿಟ್ಟು ತೊಲಗಿ ಎಂದು ಹೇಳುವುದು ಮಹಾ ಅಪರಾಧ ಆಯಿತು, ಮೇಲಾಗಿ ದೇಶದ್ರೋಹ ಆಯಿತು. ಪರಿಸ್ಥಿತಿ ಹೀಗಿತ್ತು. ಭಾರತ ಬ್ರಿಟಿಷರ ಪಾಲಿಗೆ ಕಾಮಧೇನು ಆಗಿತ್ತು. ಕಾಮ ಧೇನು ಮಾತ್ರ ಬಡಕಲಾಗುತ್ತ ಬಂತು. ಈ ದಾರುಣಪರಿಸ್ಥಿತಿ ನಮ್ಮ ಮುಖಂಡರಿಗೆ ಸಹಿಸಲಿಲ್ಲ. ಆದ್ದರಿಂದ 1857ರಲ್ಲಿ ಹಲವಾರು ದೇಶಭಕ್ತ ಮುಖಂಡರು ಸ್ವಾತಂತ್ರ್ಯ ಪಡೆಯಲು ಬ್ರಿಟಿಷರೊಡನೆ ಹೋರಾಡಿದರು. ಅವರ ಪೈಕಿ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು ಮುಖ್ಯರು. ಅವರುಕನ್ನಡಿಗರು ಎಂಬುದನ್ನ ಬಲ್ಲಿರಿ.ನಾವು ಆಗ ಗೆಲ್ಲಲಿಲ್ಲ. ಕಾರಣ. ನಮ್ಮ ಒಗ್ಗಟ್ಟು ಇರಲಿಲ್ಲ. ಆದರೆ ನಮ್ಮ ಹೋರಾಟ ಅಲ್ಲಿಗೇ ನಿಲ್ಲಲಿಲ್ಲ. ಬದಲಾಗಿ ಹೆಚ್ಚು ಹುರುಪಿ ನಿಂದಮುಂದುವರಿಯಿತು. ಬಾಲಗಂಗಾಧರತಿಲಕ್ ಮಹಾತ್ಮ ಗಾಂಧೀಜಿ, ಜವಹರಲಾಲ್ ನೆಹರು, ಸರದಾರ್ ಪಟೇಲ್, ವೀರ ಸಾವರ್ಕರ್, ಡಾ|| ಬಾಬು ರಾಜೇಂದ್ರ ಪ್ರಸಾದ್, ಚಕ್ರವರ್ತಿ ರಾಜಗೋಪಾಲಚಾರಿ, ಸುಭಾಷ್ ಚಂದ್ರಬೋಸ್

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂತಾದ ಅನೇಕ ಮುಖಂಡರು ಸ್ವಾತಂತ್ರ್ಯ ಪಡೆಯಲು ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿದರು. ಇಡೀದೇಶ ಒಂದಾಗಿ ಅವರಿಗೆ ಬೆಂಬಲ ನೀಡಿತು. ಸಾವಿರಾರು ಮಂದಿ ಪ್ರಾಣ ತೆತ್ತರು. ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು. ಸರಕಾರ ಹಲವಾರು ದೇಶಭಕ್ತರ ಆಸ್ತಿಯನ್ನು ಕಿತ್ತುಕೊಂಡಿತು. ಅವರು ಭಿಕಾರಿಗಳಾದರು. ಲಕ್ಷಾಂತರ ಮಂದಿ ಜೈಲುವಾಸ ಅನುಭವಿಸಿದರು. ಬ್ರಿಟಿಷರ ಗುಂಡಿನ ಏಟಿಗೆ ಬಲಿ ಆದವರ ಸಂಖ್ಯೆ ಲೆಕ್ಕವಿಲ್ಲ. ಮಹಿಳೆಯರು, ವಿದ್ಯಾರ್ಥಿಗಳು, ರೈತರು ಮತ್ತು ಕಾರ್ಮಿಕರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲು ಗೊಂಡರು. ಇವರೆಲ್ಲರ ಬಲಿದಾನದ ಫಲವೇ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ. ಬ್ರಿಟಿಷರು ಕಡೆಗೂ ಭಾರತ ಬಿಟ್ಟು ತೊಲಗಬೇಕಾಯಿತು.

ಅನಂತರ ದೇಶದ ಹಿರಿಯರು ಮತ್ತು ಮುಖಂಡರು ಕೂಡಿ ರಾಜ್ಯಾಂಗ ರಚಿಸಿದರು. ಮುಂದಿನ ಸರಕಾರ ಹೇಗಿರಬೇಕು ? ಎಂಬುದನ್ನು ತಿಳಿಸುವುದೇ ರಾಜ್ಯಾಂಗ. ಅದನ್ನು ಸಂವಿಧಾನ ಎಂದು ಕರೆಯುವರು. ಸಂವಿಧಾನದ ಪ್ರಕಾರ ಮೊಟ್ಟ ಮೊದಲನೆಯ ಪ್ರಜಾತಂತ್ರ ಸಂಸ್ಥೆ ಗ್ರಾಮಪಂಚಾಯಿತಿ ಅಥವಾ ಪಂಚಾಯಿತಿ ರಾಜ್ಯ.

ಭಾರತ ಹಳ್ಳಿಗಳ ರಾಷ್ಟ್ರ. ಮಹಾತ್ಮ ಗಾಂಧಿ 'ಹಳ್ಳಿಗಳಿಗೆ ಸ್ವಾತಂತ್ರ್ಯದ ಹೊಳೆ ಹರಿಯಬೇಕು. ಗ್ರಾಮರಾಜ್ಯ ಆಗ ಬೇಕು. ಗ್ರಾಮರಾಜ್ಯ ಯಶಸ್ವಿ ಆದರೆ ರಾಮರಾಜ್ಯ ಆದೀತು ಎಂದು ಹೇಳುತ್ತಿದ್ದರು. ಅಂತೂ ಬಾಪೂಜಿ ರಾಮರಾಜ್ಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕನಸು ಕಾಣುತ್ತಿದ್ದರು.

ರಾಮರಾಜ್ಯ ಅಂದರೆ ಸ್ವರ್ಗ ಅಲ್ಲ. ಅಲ್ಲಿಯೂ ಸಹ ಈಗಿನ ಹಾಗೆ ಹುಟ್ಟು-ಸಾವು ಇದ್ದೇ ಇತ್ತು. ಅನ್ನ, ವಸತಿ, ಬಟ್ಟೆಯ ಕೊರತೆ ಇರಲಿಲ್ಲ. ಜನರಲ್ಲಿ ವಿವೇಕ ಇತ್ತು. ಹೆಚ್ಚಾಗಿ ರೋಗರುಜಿನಗಳಿರಲಿಲ್ಲ. ಜನ ಸರಳ ಸ್ವಭಾವದವರು. ಆಗ ಅವರಿಗೆ ಹೆಚ್ಚು ಸುಖ ಇತ್ತು. ರಾಮರಾಜ್ಯ ಎಂದರೆ ಸುಖೀ ರಾಜ್ಯ. ರಾಮ ಅಯೋಧ್ಯೆಯ ಪ್ರಭು-ಸೇವಕ. ಅಂತಹ ಪ್ರಭು-ಸೇವಕರು ಪ್ರತಿ ಹಳ್ಳಿಯಲ್ಲೂ ಇದ್ದರು. ಆತನೇ ಈಗಿನ ಸರಪಂಚ. ಈತನಿಗೆ ಪಂಚಾಯಿತರು ಸಲಹೆಗಾರರು. ಅವರನ್ನು ಗ್ರಾಮಸ್ಥರ ಸಭೆಯಲ್ಲಿ ಈ ಗ್ರಾಮದ ಇಡೀ ವಯಸ್ಕರು ಸೇರಿ ಆರಿಸುತ್ತಿದ್ದರು. ಈ ವಿಷಯದಲ್ಲಿ ಬಹುಮಟ್ಟಿಗೆ ಏಕಾಭಿಪ್ರಾಯ ಇತ್ತು. ಸರ್ವಸಮ್ಮತಿ ಇತ್ತು. ಈಗಿನಂತೆ ಆಗ ಅನಾರೋಗ್ಯ ಮತ್ತು ಅಹಿತವಾದ ಪ್ರಚಾರ ಇರಲಿಲ್ಲ.

ಗ್ರಾಮ ಪಂಚಾಯಿತಿ ವ್ಯವಸ್ಥೆ ಚೆನಾಗಿತ್ತು. ಕ್ರಮೇಣ ಅದು ಹಾಳಾಗುತ್ತ ಬಂದಿತು. ಭಾರತ ಸ್ವಾತಂತ್ರ್ಯ ಪಡೆಯಿತಷ್ಟೆ. ಅಂದಿನಿಂದ ಗ್ರಾಮ ಪಂಚಾಯಿತಿ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆ. ಅದು ಸ್ವಾರಸ್ಯವಾದ ಕಥೆ. ಅದನ್ನು ಸೂಕ್ಷ್ಮವಾಗಿ ತಿಳಿಸುತ್ತೇನೆ.

* * *

"ತಿಳಿಸಿ ಸ್ವಾಮಿ, ವಿಷಯ ಸ್ವಾರಸ್ಯ ಆಗಿದೆ" ಎಂಬ ಧ್ವನಿ ಸಭೆಯಿಂದ ಕೇಳಿಬಂತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಾಟಕದಲ್ಲಿ ಪಂಚಾಯಿತಿ ರಾಜ್ಯ

"1956ರಲ್ಲಿ ಭಾಷಾವಾರು ತತ್ವದಂತೆ ರಾಜ್ಯಗಳು ಪುನಃ ರಚನೆ ಆದವು. ಆಗ ಹಳೆಯ ಮೈಸೂರಿಗೆ ವಿವಿಧ ರಾಜ್ಯಗಳಿಂದ ಕನ್ನಡ ಮಾತನಾಡುವ ಪ್ರದೇಶಗಳು ಸೇರಿದವು. ಅವೆಲ್ಲವೂ ಸೇರಿ ಕರ್ನಾಟಕ ರಾಜ್ಯ ಆಯಿತು. ಆದರೆ ಕರ್ನಾಟಕದ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಗ್ರಾಮ ಪಂಚಾಯಿತಿ ವ್ಯವಸ್ಥೆ ಇತ್ತು. ಅದು ಹೋಗಿ ಒಂದೇ ರೀತಿಯ ವ್ಯವಸ್ಥೆ ಜಾರಿಗೆ ಬಂದಿದ್ದು 1959ರಲ್ಲಿ. 1959ರಿಂದ ಜಾರಿಗೆ ಬಂದ ವ್ಯವಸ್ಥೆಯ ಮುಖ್ಯ ಲಕ್ಷಣ-



Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಾಮ, ತಾಲ್ಲೂಕು, ಜಿಲ್ಲೆ ಎಂಬ ಮೂರು ಮಜಲಿನ ಅಧಿಕಾರ ಸೋಪಾನ.

1952ರಲ್ಲಿ ಭಾರತಾದ್ಯಂತ ಸಮುದಾಯ ಅಭ್ಯುದಯ (ಕಮ್ಯುನಿಟಿ ಡೆವಲಪ್‌ಮೆಂಟ್) ಯೋಜನೆ ಜಾರಿಯಾಗಿತ್ತು. ಅದು ಆರಂಭವಾದ ಅಲ್ಪ ಕಾಲದಲ್ಲಿಯೇ ಕಂಡುಬಂದ ಕೊರತೆಯೆಂದರೆ ಯೋಜನೆಗಳೆಲ್ಲ ರಾಜಧಾನಿಯಲ್ಲಿ ರೂಪ ಗೊಳ್ಳುವುದರಿಂದ, ಸ್ಥಳೀಯ ಗ್ರಾಮಸ್ಥರು ಅವುಗಳಲ್ಲಿ ಸಾಕಷ್ಟು ಉತ್ಸಾಹದಿಂದ ಪಾಲ್ಗೊಳ್ಳುತ್ತಿರಲಿಲ್ಲವೆಂಬುದು. ಗ್ರಾಮಸ್ಥರಲ್ಲಿ ಉತ್ಸಾಹವನ್ನು ಹುಟ್ಟಿಸಬೇಕಾದರೆ ಯೋಜನೆ ಗಳನ್ನು ರೂಪಿಸುವುದರಲ್ಲಿಯೂ ಕಾರ್ಯಗತಗೊಳಿಸುವುದರ ಲ್ಲಿಯೂ ಅವರಿಗೆ ಪ್ರಮುಖ ಪಾತ್ರ ನೀಡಬೇಕು. ಇದು ಸಾಧ್ಯವಾಗುವುದು ಪಂಚಾಯಿತಿ ರಾಜ್ಯ ವ್ಯವಸ್ಥೆಯಲ್ಲಿ. ಇಂಥ ವ್ಯವಸ್ಥೆಯ ರೂಪರೇಷೆ ತಯಾರಿಸಲು ಬಲವಂತ ರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ನೇಮಕಗೊಂಡಿತು.

ಗ್ರಾಮಗಳ ಹಂತದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವುದು ಅದರ ಉದ್ದೇಶ. ಅಂದರೆ ಗಾಂಧೀಜಿಯ 'ರಾಮರಾಜ್ಯ'ದ ಕಲ್ಪನೆಯನ್ನು ಕಾರ್ಯರೂಪಕ್ಕೆ ತರುವುದು. ಆದರೆ ಆ ಸಮಿತಿಯ ಶಿಫಾರಸುಗಳು ಕಾರ್ಯರೂಪಕ್ಕೆ ಬರಲಿಲ್ಲ.

ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರೀಕರಣ ಉದ್ದಿಷ್ಟ ಪ್ರಮಾಣದಲ್ಲಿ ಆಗದ ಕಾರಣ ಕೊಂಡಜ್ಜಿ ಬಸಪ್ಪನವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕರ್ನಾಟಕ ಸರ್ಕಾರ ರಚಿಸಿತು. ಉದ್ದೇಶ ಕರ್ನಾಟಕಕ್ಕೆ ಹೊಂದುವಂತೆ ಗ್ರಾಮ ಪಂಚಾಯಿತಿ ವ್ಯವಸ್ಥೆ ಮಾಡುವುದು. ಈ ಸಮಿತಿಯ ಶಿಫಾರಸಿನ ಆಧಾರದ ಮೇಲೆ 1964ರಲ್ಲಿ ಒಂದು ಮಸೂದೆ ರೂಪಿತವಾಯಿತು. ಅದರ ಪ್ರಕಾರ ಅಧಿಕಾರ ಮೂರು ಹಂತದಲ್ಲಿ ಹಂಚಿಕೆ ಆಗಬೇಕಾಗಿತ್ತು. ಆದರೆ ಅದೂ ಸಹ ಕಾರ್ಯಗತ ಆಗಲಿಲ್ಲ. ಕಾರಣ, ಅಂದಿನ ಸರಕಾರಕ್ಕೆ ಅದನ್ನು ಜಾರಿಗೆ ತರಲು ಪ್ರಾಯಶಃ ಇಚ್ಛೆ ಇರಲಿಲ್ಲ. ಆಕಸ್ಮಿಕವಾಗಿ ವಿಧಾನಸಭೆಯೂ ರದ್ದಾದ ಕಾರಣ ಶಿಫಾರಸು ಮೂಲೆ ಸೇರಿತು.

ಕರ್ನಾಟಕ ಸರಕಾರ 1977-78ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಿ ಪಂಚಾಯತ ರಾಜ್ಯ ಸಂಸ್ಥೆಗಳ ಅಸ್ತಿತ್ವಕ್ಕೂ, ಆಡಳಿತ ವಿಕೇಂದ್ರೀಕರಣಕ್ಕೂ ದಾರಿಮಾಡಿತು. ಈ ಮಸೂದೆ 1985 ಜುಲೈ ಎರಡನೆ ವಾರದಲ್ಲಿ ರಾಷ್ಟ್ರಪತಿಗಳ ಅಂಗೀಕಾರ ಪಡೆಯಿತು. ಹೊಸ ಕಾಯ್ದೆ 1985 ಆಗಸ್ಟ್ 14ರಿಂದ ಜಾರಿಗೆ ಬಂದಿದೆ.

ಈಗ ಕರ್ನಾಟಕ ಜನತಾ ಸರಕಾರ ಗ್ರಾಮರಾಜ್ಯ ಸ್ಥಾಪನೆಗೆ ವ್ಯವಸ್ಥೆ ಮಾಡಿದೆ.

ಕಾನೂನಿನ ಪ್ರಕಾರ 3 ಹಂತದಲ್ಲಿ ಅಧಿಕಾರ ಹಂಚಿಕೆ ಆಗಿದೆ: ಮಂಡಳ ಪಂಚಾಯಿತಿ, ತಾಲ್ಲೋಕು ಪಂಚಾಯಿತಿ ಸಮಿತಿ, ಜಿಲ್ಲಾ ಪರಿಷತ್.

ಗ್ರಾಮಗಳಲ್ಲಿ ಹಿಂದೆ ಗ್ರಾಮ ಪಂಚಾಯಿತಿಗಳು ಇದ್ದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಒಂದಕ್ಕಿಂತ ಹೆಚ್ಚು ಗ್ರಾಮಗಳು ಸೇರಿ ಮಂಡಳ ಪಂಚಾಯಿತಿಗಳು ರಚನೆ ಆಗುವುವು. ಮಂಡಳ ಪಂಚಾಯಿತಿಗಳಿಗೆ ಮೂಲದಲ್ಲಿ ಸ್ಫೂರ್ತಿ ಕೊಡುವ ಸಂಸ್ಥೆ ಗ್ರಾಮಸಭೆಗಳು. ಮೊದಲು ಗ್ರಾಮಗಳಲ್ಲೇ ನ್ಯಾಯತೀರ್ಮಾನ ಮಾಡುವ ವ್ಯವಸ್ಥೆ ಇತ್ತು. ಅದನ್ನು ಕಾನೂನಿನ ಪ್ರಕಾರ ಪುನಃ ಜಾರಿಗೆ ತರುವ ವ್ಯವಸ್ಥೆ ಆಗಿದೆ.

"ಈಗಿನ ಸರಕಾರ ಗ್ರಾಮಸ್ಥರ ಸರಕಾರ, ಸ್ವಾಮಿ. ವಿಷಯ ಚೆನ್ನಾಗಿದೆ. ನಮಗೆ ಕೇಳುವ ಕುತೂಹಲ ಹೆಚ್ಚಿದೆ."

"ಇಲ್ಲಿಗೆ ನಿಲ್ಲಿಸೋಣ. ಪುನಃ ನಾಳೆ 8 ಘಂಟೆಗೆ ಸಭೆ ಸೇರೋಣ."

* * *

ಮರುದಿನ ಮಾಮೂಲಿನಂತೆ ಸಭೆ ಸೇರಿತು. ಹಿಂದಿನ ದಿನಕ್ಕಿಂತ ಎರಡು ಪಟ್ಟು ಜನ ಸೇರಿದರು. ಮಹಿಳೆಯರೂ ಸಹ ಸಭೆಗೆ ಬಾರದೇ ಇರಲಿಲ್ಲ.

ಉಪಾಧ್ಯಾಯರಿಗೆ ತುಂಬಿದ ಸಭೆ ನೋಡಿ ಆನಂದ ಆಯಿತು. "ನಿನ್ನೆ ಸ್ವಾತಂತ್ರ್ಯ ಪಡೆದ ಬಗೆ ವಿವರಿಸಿದೆ. ಹಾಗೆ ಗ್ರಾಮೀಣ ಮಟ್ಟದಲ್ಲಿ ಅಧಿಕಾರ ಹಂಚಲು ಸರಕಾರದ ಪ್ರಯತ್ನವೇನೆಂಬುದನ್ನು ತಿಳಿಸಿದ್ದೇನೆ. ಇಂದು ಗ್ರಾಮೀಣ ಮಟ್ಟದಲ್ಲಿ ಸರಕಾರ ಗ್ರಾಮ ಪಂಚಾಯಿತಿ ರಾಜ್ಯದ ತತ್ವ ಹೇಗೆ ಅಳವಡಿಸಿದೆ ಎಂಬುದನ್ನು ತಿಳಿಯೋಣ."

ಗ್ರಾಮಸಭೆಯ ರಚನೆ

ಗ್ರಾಮಸಭೆಯನ್ನು ಇಡೀ ಪಂಚಾಯಿತಿ ರಾಜ್ಯ ವ್ಯವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥೆಯ ನಾಭಿಯೆನ್ನಬಹುದು. ಗ್ರಾಮಸಭೆ ಎಷ್ಟು ಸಮರ್ಥವಾಗಿ ಕೆಲಸ ಮಾಡುತ್ತದೆ ಎನ್ನುವುದರ ಮೇಲೆಯೇ ಈ ವ್ಯವಸ್ಥೆಯ ಯಶಸ್ಸು ಅವಲಂಬಿಸಿರುವುದು. ಆಡಳಿತದಲ್ಲಿ ಜನ ನೇರವಾಗಿ ಪಾಲ್ಗೊಳ್ಳುವುದು ಗ್ರಾಮಸಭೆಯ ಮಟ್ಟದಲ್ಲಿ. ಅಲ್ಲಿಂದ ಮೇಲ್ಪಟ್ಟ ಆಡಳಿತಯಂತ್ರದಲ್ಲಿ ಜನರ ಪಾತ್ರ ಪರೋಕ್ಷ ಮಾತ್ರವಾಗಿರುತ್ತದೆ. ಆದ್ದರಿಂದ ಗ್ರಾಮಸಭೆಯನ್ನು ಪಂಚಾಯಿತಿ ರಾಜ್ಯದ, ಅಷ್ಟೇಕೆ, ಪ್ರಜಾಪ್ರಭುತ್ವದ ಅಡಿಗಲ್ಲೆಂದೇ ಹೇಳಬಹುದು.

ಗ್ರಾಮ ಪಂಚಾಯಿತಿ ಗ್ರಾಮದ ನಾಗರಿಕರು ಆರಿಸಿದ ಗ್ರಾಮದ ಸಚಿವ ಸಂಪುಟ. ಸಚಿವರು ಎಂದರೆ ಮಂತ್ರಿಗಳು. ಸಚಿವ ಸಂಪುಟ ಆಯ್ಕೆ ಮಾಡಲು ಇನ್ನೊಂದು ದೊಡ್ಡ ಸಂಸ್ಥೆ ಇರಬೇಕಲ್ಲವೆ? ಅದಕ್ಕೆ ಗ್ರಾಮಸಭೆ ಎಂದು ಹೆಸರು. ಗ್ರಾಮಸಭೆ ಎಂದರೆ ಇಡೀ ಗ್ರಾಮದ ವಯಸ್ಕರ ಸಭೆ- ಗಂಡಸರು, ಹೆಂಗಸರು, ಮುದುಕರು, ಯುವಕರು ಮತ್ತು ಯುವತಿಯರು. ಗ್ರಾಮಸಭೆ ನಿಗದಿಯಾದ ಕಾಲಕ್ಕೆ ಸೇರಬೇಕು. ಪಂಚಾಯಿತಿಯ ಕೆಲಸವನ್ನು ಪರಿಶೀಲಿಸಬೇಕು. ಅದರ ಕೆಲಸಗಳಿಗೆ ಬೆಂಬಲ ಅಗತ್ಯ. ಆದರೆ ಗ್ರಾಮ ಪಂಚಾಯಿತಿ ಇಷ್ಟಬಂದಂತೆ ವರ್ತಿಸಿದಲ್ಲಿ ದಂಡಿಸಬೇಕು. ಗ್ರಾಮಸಭೆಗೆ ಕಾನೂನಿನ ಬಲವಿಲ್ಲ. ಆದರೆ ಅದಕ್ಕೆ ಹೆಚ್ಚಾಗಿ ನೈತಿಕ ಬಲ ಇದೆ.

ಗ್ರಾಮಸಭೆಯ ಸದಸ್ಯರು ಯಾರು? ಎಂಬುದನ್ನು ತಿಳಿಯೋಣ. ಗ್ರಾಮದಲ್ಲೇ ವಾಸವಾಗಿರಬೇಕು. 18 ವಯ

Sri Vidyabharathi Book Centre, Sringeri

CC-O. In Public Domain. Digitized by eGangotri



ಮಂಡಳ ಪಂಚಾಯಿತಿ ಪ್ರಜಾಪ್ರಭುತ್ವದ ಅಡಿಗಲ್ಲು

ಸ್ಸಾಗಿರತಕ್ಕದ್ದು. ಆತನ ಹೆಸರು ಜಿಲ್ಲಾ ಪರಿಷತ್ತಿನ ಮತದಾರರ ಪಟ್ಟಿಯಲ್ಲಿ ಇರಬೇಕು. ಆತ ಮಾತ್ರ ಗ್ರಾಮಸಭೆಯ ಸದಸ್ಯ. ಗ್ರಾಮಸಭೆ ಕಡೆಯ ಪಕ್ಷ ವರ್ಷದಲ್ಲಿ ಎರಡು ಬಾರಿ ಸಭೆ ಸೇರಬೇಕು.

ಗ್ರಾಮಸಭೆಯ ಹೊಣೆ

1. ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದು ;

Sri Vidyabharathi Book Centre, Sringeri

CC-O. In Public Domain. Digitized by eGangotri

2. ಗ್ರಾಮದ ಏಳಿಗೆಗೆ ಹೊಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು, ಗ್ರಾಮಗಳಲ್ಲಿ ಒಗ್ಗಟ್ಟು ಮತ್ತು ಸಮಗ್ರತೆಯನ್ನು ಕಾಪಾಡುವುದು ;

3. ಆರೋಗ್ಯ ದೃಢಕಾಯರಿಂದ ಕೂಡಿದ ಭೂಸೈನ್ಯ ರಚನೆ ;

4. ವಯಸ್ಕರ ಶಿಕ್ಷಣ ;

5. ವಹಿಸಬಹುದಾದ ಇತರ ಕಾರ್ಯಗಳು.

ಹಿಂದಿನ ವರ್ಷ ನಡೆದ ಅಭಿವೃದ್ಧಿ ಕಾರ್ಯಕ್ರಮಗಳ ವರದಿಯನ್ನು ಮಂಡಳಪಂಚಾಯಿತಿ ಗ್ರಾಮಸಭೆಗೆ ಒಪ್ಪಿಸುವುದು. ಅಂತೆಯೇ ಪ್ರಸಕ್ತ ವರ್ಷದಲ್ಲಿ ಕೈಕೊಳ್ಳುವ ಕಾರ್ಯಕ್ರಮಗಳ ವಿಷಯವೂ ಸಭೆಯ ಮುಂದೆ ಬರುವುದು. ಇವೆರಡು ವಿಷಯಗಳನ್ನು ಗ್ರಾಮಸಭೆ ಪರಿಶೀಲಿಸುವುದು. ಗ್ರಾಮಸಭೆಯ ಅಧ್ಯಕ್ಷತೆಯನ್ನು ಪ್ರಧಾನರು ವಹಿಸುವರು.

ಗ್ರಾಮಸಭೆಗೆ ಇನ್ನೂ ಕೆಲವು ಜವಾಬ್ದಾರಿಗಳಿವೆ. ಅವು ಹೀಗಿವೆ:

ಅ) ಗ್ರಾಮದ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ;

ಆ) ಗ್ರಾಮನೈರ್ಮಲ್ಯ ಮತ್ತು ಚರಂಡಿ ವ್ಯವಸ್ಥೆ ನೋಡಿಕೊಳ್ಳುವುದು ;

ಇ) ಗ್ರಾಮಗಳಲ್ಲಿ ಮೊದಲು ಸೋಮವಾರದ ಕೆಲಸ ನಡೆಯುತ್ತಿತ್ತು. ಆಗ ಮನೆಗೆ ಒಂದಾಳು ಬಂದು ಗ್ರಾಮದ ಒಟ್ಟಾರೆ ಕೆಲಸವನ್ನು ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಾಮದಲ್ಲಿ ಸೇವೆ ಸಲ್ಲಿಸುವ ಸ್ವಯಂಸೇವಕರ ತಂಡದ ನಿರ್ಮಾಣ; ಗ್ರಾಮದ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹಣದ ರೂಪದಲ್ಲಿ ಅಥವಾ ಸೇವೆಯ ರೂಪದಲ್ಲಿ ಕಾಣಿಕೆ ಎತ್ತುವುದು;

ಈ) ಮಂಡಳ ಪಂಚಾಯಿತಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಹಕರಿಸುವುದು.

ಗ್ರಾಮಸಭೆಯ ಶಿಫಾರಸುಗಳನ್ನು ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು. ಗ್ರಾಮಸಭೆಯು ವ್ಯವಸ್ಥೆ ಹೊಸದು. ಈ ಸಭೆಯ ಕಾರ್ಯಕಲಾಪಗಳಲ್ಲಿ ಪ್ರತಿಯೊಬ್ಬ ವಯಸ್ಕನು ಪಾಲುಗೊಳ್ಳಲು ಅವಕಾಶ ಇದೆ. ಅವನು ತನ್ನ ಗ್ರಾಮದ ಕುಂದುಕೊರತೆಗಳ ಬಗ್ಗೆ ವಿಚಾರ ಮಾಡಬಹುದು. ಗ್ರಾಮದ ಏಳಿಗೆಗೆ ಸಲಹೆ ನೀಡಬಹುದು. ಪ್ರಜಾಪ್ರಭುತ್ವದ ತಿರುಳು ಪ್ರಜೆಗಳ ಆಡಳಿತ. ಆ ತತ್ವದ ಅನುಕರಣೆಯನ್ನು ಗ್ರಾಮಸಭೆಯ ವ್ಯವಸ್ಥೆಯಲ್ಲಿ ನೋಡಬಹುದು.

ಮಂಡಳ ಪಂಚಾಯಿತಿಗಳು

ಮಂಡಳ ಪಂಚಾಯಿತಿಯ ಕ್ಷೇತ್ರವನ್ನು ನಿರ್ಧರಿಸುವವರು ಜಿಲ್ಲಾಧಿಕಾರಿಗಳು. ಮಂಡಳ ಪಂಚಾಯಿತಿಯ ವ್ಯಾಪ್ತಿಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಹಳ್ಳಿಗಳು ಬರುವುವು. ಆ ಹಳ್ಳಿಗಳ ಜನಸಂಖ್ಯೆ 8,000ಕ್ಕಿಂತ ಕಡಮೆ ಇರಬಾರದು, 12,000ಕ್ಕೆ ಮೀರಿರಬಾರದು. ಈ ನಿಯಮವು ಮಲೆನಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳ್ಳಿಗಳಿಗೆ ಅನ್ವಯ ಆಗುವುದಿಲ್ಲ. ಅಲ್ಲಿ ಹಳ್ಳಿಯಿಂದ ಹಳ್ಳಿಗೆ ದೂರ. ಜನಸಂಖ್ಯೆ ಕಡಮೆ. ಮಧ್ಯೆಮಧ್ಯೆ ಕಾಡುಗಳು ಬೇರೆ. ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮಲೆನಾಡು ಜಿಲ್ಲೆಗಳು. ಹಾಸನದ ವಿನಾ ಉಳಿದ ಮಲೆನಾಡು ಜಿಲ್ಲೆಗಳಲ್ಲಿ 4,000 ಪ್ರಜಾ ಸಂಖ್ಯೆಯಿಂದ ಕೂಡಿದ ಹಳ್ಳಿಗಳ ಗುಂಪಿಗೆ ಒಂದು ಮಂಡಳ ಪಂಚಾಯಿತಿ. ಅದರ ವ್ಯಾಪ್ತಿ ಹೆಚ್ಚ ಬಹುದು ಅಥವಾ ಕಡಮೆ ಆಗಬಹುದು. ಆದರೆ ಜನಸಂಖ್ಯೆಯ ಮಿತಿಯನ್ನು ಕಡಮೆ ಮಾಡುವಂತಿಲ್ಲ.

ಮಂಡಳ ಪಂಚಾಯಿತಿ ರಚನೆ

ಮಂಡಳ ಪಂಚಾಯಿತಿ ಗ್ರಾಮಸಭಾ ಸದಸ್ಯರಿಂದ ಆಯ್ಕೆ ಆದ ಸಂಸ್ಥೆ. ಅಂತಹ ಆಯ್ಕೆ ಕಾನೂನಿಗೆ ಅನುಗುಣವಾಗಿ ಇರತಕ್ಕದ್ದು.

ನಾಲ್ಕುನೂರು ಅಥವಾ ಭಾಗಶಃ ಜನಸಂಖ್ಯೆ ಇರುವ ಮಂಡಳಕ್ಕೆ ಒಬ್ಬ ಪ್ರತಿನಿಧಿ. ಮಂಡಳ ಪಂಚಾಯಿತಿಯ ಪ್ರತಿನಿಧಿಗಳ ಸಂಖ್ಯೆ 10ರಿಂದ 32.

ಮಹಿಳೆಯರಿಗೆ, ಹರಿಜನ, ಗಿರಿಜನರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಸ್ಥಾನಗಳು ಮೀಸಲು. ಶೇಕಡ 25ರಷ್ಟು ಸ್ಥಾನಗಳು ಮಹಿಳೆಯರಿಗೆ ಮೀಸಲು. ಮಂಡಳ ಪಂಚಾಯಿತಿಗೆ ಕೆಲವು ವೇಳೆ ಹಿಂದುಳಿದ ವರ್ಗದವರು ಆಯ್ಕೆ ಆಗದಿರಬಹುದು. ಆಗ ಇಬ್ಬರನ್ನು ಜಿಲ್ಲಾಧಿಕಾರಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಮಕರಣ ಮಾಡುವರು.

ಹರಿಜನ, ಗಿರಿಜನ ಪ್ರತಿನಿಧಿಗಳ ಸಂಖ್ಯೆ ನಿಯಮದ ರೀತ್ಯಾ ಆ ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ಇರುವುದು. ಉದಾಹರಣೆಗೆ. ಒಂದು ಮಂಡಳಿಯಲ್ಲಿ 10,000 ಜನಸಂಖ್ಯೆ ಇರಬಹುದು. ಅದರ ಪೈಕಿ ಹರಿಜನ ಮತ್ತು ಗಿರಿಜನರ ಸಂಖ್ಯೆ 2,000. ಆಗ ನಾಲ್ಕು ಅಥವಾ ಐದು ಸ್ಥಾನಗಳನ್ನು ಹರಿಜನ ಗಿರಿಜನರಿಗೆ ಮೀಸಲಾಗಿಡತಕ್ಕದ್ದು.

ಮಂಡಳ ಪಂಚಾಯಿತಿ ಸದಸ್ಯರ ಅಧಿಕಾರದ ಅವಧಿ ಐದು ವರ್ಷ. ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರು ಸಾಮಾನ್ಯಸ್ಥಾನಗಳಿಗೆ ಚುನಾವಣೆಗೆ ನಿಲ್ಲಬಹುದು.

ಚುನಾವಣಾಕ್ಷೇತ್ರ ಏಕಸದಸ್ಯ ಕ್ಷೇತ್ರ ಆಗಿರಬಹುದು, ಅಥವಾ ಬಹುಸದಸ್ಯ ಕ್ಷೇತ್ರ ಆಗಿರಬಹುದು. ಈ ಅಂಶಗಳನ್ನು ನಿರ್ಧರಿಸುವವರು ಜಿಲ್ಲಾಧಿಕಾರಿಗಳು. ಚುನಾವಣೆಗೆ ಗುಪ್ತ ಮತದಾನ ಪದ್ಧತಿ.

ನ್ಯಾಯ ಪಂಚಾಯಿತಿ ವ್ಯವಸ್ಥೆ

ಹಿಂದೆ ಗ್ರಾಮಗಳು ಸ್ವಯಂಪರಿಪೂರ್ಣ ಆಗಿದ್ದವು ; ನ್ಯಾಯ ಆಯಾ ಗ್ರಾಮದಲ್ಲೇ ತೀರ್ಮಾನ ಆಗುತ್ತಿತ್ತು ಎಂದು ಕೇಳಿದ್ದೇವೆ. ನ್ಯಾಯತೀರ್ಮಾನ ಊರಿನಿಂದ ಹೊರಗೆ ಹೋಗುತ್ತಿರಲಿಲ್ಲ. ನ್ಯಾಯತೀರ್ಮಾನದಲ್ಲಿ ವೃಥಾ ಕಾಲಹರಣ ಆಗುವುದೂ ತಪ್ಪುತ್ತಿತ್ತು. ನ್ಯಾಯ ಬೇಡಿದವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಗ್ರಾಮೀಣ ಹಂತದಿಂದ ರಾಷ್ಟ್ರಮಟ್ಟದ ವರೆಗೆ ಚುನಾವಣೆ

ಹೆಚ್ಚು ಹಣ ಖರ್ಚು ಮತ್ತು ಕಿರುಕುಳ ಇರಲಿಲ್ಲ. ಕರ್ನಾಟಕ ಸರಕಾರ ಅಂತಹ ನ್ಯಾಯ ಪಂಚಾಯಿತಿ ವ್ಯವಸ್ಥೆಯನ್ನು ಕೊಡಲು ಒಪ್ಪಿದೆ. ಆದರೆ ಇಂತಹ ವ್ಯವಸ್ಥೆ ಐದು ವರ್ಷಗಳ ನಂತರ ಜಾರಿಗೆ ಬರುವುದು.

1. ಸರಕಾರ ಮಂಡಳ ಪಂಚಾಯಿತಿಗೆ ಒಂದರಂತೆ ನ್ಯಾಯ ಪಂಚಾಯಿತಿಯನ್ನು ನೀಡಬಹುದು.

2. ನ್ಯಾಯ ಪಂಚಾಯಿತಿ ಸದಸ್ಯರ ಸಂಖ್ಯೆ ಐದು. ಅವರ ಪೈಕಿ ಕೊನೆಯುಪಕ್ಷ ಒಬ್ಬ ಮಹಿಳೆ, ಪರಿಶಿಷ್ಟ ಅಥವಾ ಬುಡಕಟ್ಟು ವರ್ಗದವರು ಒಬ್ಬರು. ಹಿಂದುಳಿದ ವರ್ಗದವರು ಒಬ್ಬರು ಇರಲೇಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

3. ಚುನಾವಣೆಗೆ ನಿಲ್ಲುವ ಉಮೇದುವಾರನ ವಯಸ್ಸು 30. ಆತ ಮಂಡಳಿಯ ಕ್ಷೇತ್ರದಲ್ಲಿ ವಾಸವಾಗಿರಬೇಕು. ಜೊತೆಗೆ ಅವನಿಗೆ ಓದುಬರಹ ಬರಬೇಕು.

4. ಮಂಡಳ ಪಂಚಾಯಿತಿ ಸದಸ್ಯರು ನ್ಯಾಯ ಪಂಚಾಯಿತಿಗೆ ನಿಲ್ಲುವಂತಿಲ್ಲ ; ಒಂದು ಪಕ್ಷ ನಿಂತಲ್ಲಿ ಅವರು ಪಂಚಾಯತಿ ಸದಸ್ಯತ್ವ ಕಳೆದುಕೊಳ್ಳುವರು.

ಸರಕಾರಿ ಅಥವಾ ಸ್ಥಳೀಯ ಸಂಸ್ಥೆಗಳಿಂದ ಅಧಿಕಾರಿಗಳು ನಾನಾ ಕಾರಣಗಳಿಗಾಗಿ ವಜಾ ಆಗಿರಬಹುದು. ಅಂತಹವರು ಚುನಾವಣೆಗೆ ನಿಲ್ಲಲು ಅರ್ಹರಲ್ಲ.

ಆಯಾ ಮಂಡಳ ಪಂಚಾಯಿತಿ ಕ್ಷೇತ್ರದಲ್ಲಿ ಮೂರು ತಿಂಗಳು ಸತತವಾಗಿ ವಾಸವಾಗಿಲ್ಲದಿದ್ದರೆ ಸದಸ್ಯತ್ವ ರದ್ದಾಗುವುದು. ನಾಲ್ಕು ತಿಂಗಳಿಗಿಂತ ಹೆಚ್ಚು ರಜ ತೆಗೆದುಕೊಳ್ಳುವಂತಿಲ್ಲ.

5. ನ್ಯಾಯ ಪಂಚಾಯಿತಿ ಸದಸ್ಯರ ಪೈಕಿ ಮೂರರಲ್ಲಿ ಒಂದು ಭಾಗ ಸದಸ್ಯರು ಎರಡು ವರ್ಷಕ್ಕೆ ಒಮ್ಮೆ ನಿವೃತ್ತರಾಗುವರು. ಆಗ ಅವರು ಪುನಃ ಚುನಾವಣೆಗೆ ನಿಲ್ಲಬಹುದು.

6. ನ್ಯಾಯ ಪಂಚಾಯಿತಿ ಸದಸ್ಯರ ಪೈಕಿ ಒಬ್ಬರು ಮುಖ್ಯ ನ್ಯಾಯ ವಿಚಾರಕರು. ಅವರ ಆಯ್ಕೆ ಚುನಾವಣೆ ಮೂಲಕ. ಅವರು ನ್ಯಾಯ ಪಂಚಾಯಿತಿ ಸಭೆಯ ಅಧ್ಯಕ್ಷತೆ ವಹಿಸುವರು. ಕೆಲವು ಸಂದರ್ಭಗಳಲ್ಲಿ ನ್ಯಾಯ ವಿಚಾರಕರ ಆಯ್ಕೆ ಆಗದೆ ಇರಬಹುದು. ಆಗ ಅವರ ನೇಮಕವನ್ನು ಜಿಲ್ಲಾಧಿಕಾರಿ ಮಾಡುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

7. ಮುಖ್ಯ ನ್ಯಾಯ ವಿಚಾರಕರನ್ನು ಅವಿಶ್ವಾಸ ನಿರ್ಣಯದ ಮೂಲಕ ತೆಗೆಯಬಹುದು. ಹಾಗೆ ತೆಗೆಯಲು ನಾಲ್ಕರಲ್ಲಿ ಮೂರು ಭಾಗ ಪಂಚಾಯಿತಿ ಸದಸ್ಯರು ಅವರ ವಿರುದ್ಧ ಅವಿಶ್ವಾಸ ನಿರ್ಣಯದ ಪರ ಮತ ನೀಡಬೇಕು.

ಮಂಡಳ ಪಂಚಾಯಿತಿಯ ಕಾರ್ಯದರ್ಶಿಗಳೇ ನ್ಯಾಯ ಪಂಚಾಯಿತಿಯ ಕಾರ್ಯದರ್ಶಿಗಳು :

ನ್ಯಾಯ ಪಂಚಾಯಿತಿಯ ಹೊಣೆ

1. ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸಬಹುದು. ಸಿವಿಲ್ ಮೊಕದ್ದಮೆಯ ಮೊತ್ತ 1,000 ರೂ. ಗಳಿಗೆ ಮೀರಿರಬಾರದು. ನ್ಯಾಯ ಪಂಚಾಯಿತಿಯ ಹೊಣೆ ಹೀಗಿದೆ :

ಅ) ಗುತ್ತಿಗೆ (ಕಾಂಟ್ರ್ಯಾಕ್ಟ್) ಕರಾರಿನ ಪ್ರಕಾರ ಹಣ ಪಾವತಿ ಆಗದಿದ್ದಲ್ಲಿ ;

ಆ) ಚರ ಆಸ್ತಿ ಅಥವಾ ಅದರ ಬೆಲೆ ವಾಪಸು ಪಡೆಯುವ ಬಗ್ಗೆ ಉಂಟಾದ ವಿವಾದಗಳು ;

ಇ) ಚರ ಆಸ್ತಿಗೆ ಜಖಂ ಮಾಡುವುದು ಇಲ್ಲವೆ ಅಪಹರಿಸುವುದು ;

ಈ) ದನಕರುಗಳ ಅತಿಕ್ರಮ ಪ್ರವೇಶದಿಂದ ಉಂಟಾಗುವ ಹಾನಿ.

Sri Vidyabharathi Book Centre, Sringeri

ನ್ಯಾಯ ಪಂಚಾಯಿತಿಗೆ ಜೈಲು ಶಿಕ್ಷೆ ವಿಧಿಸುವ ಅಧಿಕಾರ

CC-O. In Public Domain. Digitized by eGangotri

ಇಲ್ಲ. ಐವತ್ತು ರೂಪಾಯಿ ಮೀರದಂತೆ ಜುಲ್ಮಾನೆ ಹಾಕ ಬಹುದು.

ನ್ಯಾಯ ಪಂಚಾಯಿತಿಯ ವಿಚಾರಣೆಯನ್ನು ಸಾರ್ವ ಜನಿಕರು ನೋಡಬಹುದು. ಆದರೆ ಲಾಯರುಗಳು ಅಂತಹ ಮೊಕದ್ದಮೆಯಲ್ಲಿ ವಾದಿಸುವಂತಿಲ್ಲ.

ಕೆಲವು ಮೊಕದ್ದಮೆಗಳು ಕ್ಲಿಷ್ಟ ಮತ್ತು ಕಠಿಣ ಆಗಿರ ಬಹುದು. ಅಂತಹ ಮೊಕದ್ದಮೆಗಳನ್ನು ಜಿಲ್ಲಾ ಅಥವಾ ಸೆಷನ್ಸ್ ಕೋರ್ಟಿಗೆ ವರ್ಗಾಯಿಸಲು ಅವಕಾಶ ಇದೆ.

ನ್ಯಾಯ ಪಂಚಾಯಿತಿಯ ತೀರ್ಪಿನ ಮೇಲೆ ಮನವಿ ಮಾಡಬಹುದು. ಅಂತಹ ಮನವಿಯನ್ನು ತೀರ್ಪು ನೀಡಿದ ಎರಡು ತಿಂಗಳಿನ ಒಳಗೆ ಕಳುಹಿಸಬೇಕು. ಜಿಲ್ಲಾ ನ್ಯಾಯಾ ಲಯವು ನ್ಯಾಯ ಪಂಚಾಯಿತಿ ತೀರ್ಪಿನ ದಾಖಲೆಗಳನ್ನು ತರಿಸಿ ನೋಡಬಹುದು. ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸಬಹುದು. ಕಾನೂನಿಗೆ ಅನುಗುಣವಾಗಿ ತೀರ್ಪು ಇದೆಯೆ ? ಶಿಕ್ಷೆ ನೀಡಿರುವುದು ಸರಿಯೆ ? ಈ ಅಂಶಗಳನ್ನು ಪರಿಶೀಲಿಸಬಹುದು. ವಿಚಾರಣೆಯನ್ನು ಮಧ್ಯದಲ್ಲೇ ನಿಲ್ಲಿಸ ಬಹುದು. ಜಿಲ್ಲಾ ಅಥವಾ ಸೆಷನ್ಸ್ ನ್ಯಾಯಾಲಯದ ತೀರ್ಪೇ ಕಡೆಯದು. ಅದರ ತೀರ್ಪಿನ ವಿಮರ್ಶೆಗೆ ಅಥವಾ ಪುನಃಪರಿಶೀಲನೆಗೆ ಅವಕಾಶ ಇಲ್ಲ.

ಕೆಲವು ವೇಳೆ ನ್ಯಾಯ ಪಂಚಾಯಿತಿ ತನ್ನ ಅಧಿಕಾರ ದುರುಪಯೋಗ ಮಾಡಬಹುದು. ಇಲ್ಲವೆ ತನ್ನ ಕಾರ್ಯ ವನ್ನು ಸರಿಯಾಗಿ ಮಾಡದಿರಬಹುದು. ಆಗ ನ್ಯಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಚಾಯಿತಿಯ ವಿವರಣೆಯನ್ನು ಕೇಳಬಹುದು. ಅನಂತರ ಅದನ್ನು ರದ್ದು ಮಾಡಬಹುದು. ಆಗ ಬದಲಾಗಿ ಹೊಸ ಪಂಚಾಯಿತಿಯನ್ನು ರಚಿಸಬಹುದು.

ಮಂಡಳ ಪಂಚಾಯಿತಿ ಸರಿಯಾಗಿ ಕೆಲಸ ಮಾಡದಿದ್ದರೆ ಪರಿಹಾರ ಏನು ?

"ಮಂಡಳ ಪಂಚಾಯಿತಿಗೆ ಕಾನೂನಿನ ಪ್ರಕಾರ ಕೆಲವು ಅಧಿಕಾರಗಳಿವೆ. ಅವುಗಳನ್ನು ಮಂಡಳ ಪಂಚಾಯಿತಿಗಳು ಮೀರಬಹುದು. ಇಲ್ಲವೆ ಸಮರ್ಪಕವಾಗಿ ಕೆಲಸ ಮಾಡದೆ ಇರಬಹುದು. ಜಿಲ್ಲಾ ಪರಿಷತ್ತಿನ ನಿರ್ದೇಶನಗಳನ್ನು ಪಾಲಿಸದೆ ಇರಬಹುದು. ಅಂತಹ ಮಂಡಳ ಪಂಚಾಯಿತಿಗಳನ್ನು ಜಿಲ್ಲಾ ಪರಿಷತ್ತು ರದ್ದು ಮಾಡಬಹುದು.

ಇದೇ ರೀತಿ ಜಿಲ್ಲಾ ಪರಿಷತ್ ಆಗಬಹುದು. ಆಗ ಸರಕಾರ ಅದನ್ನು ರದ್ದು ಮಾಡಬಹುದು. ಹೀಗೆ ರದ್ದಾದ ಆರು ತಿಂಗಳಲ್ಲಿ ಪುನರ್ರಚನೆ ಆಗತಕ್ಕದ್ದು. ರದ್ದಾದ ಅವಧಿಯಲ್ಲಿ ಮಂಡಳ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್ತಿನ ಕೆಲಸ ಕಾರ್ಯಗಳು ನಡೆಯಬೇಡವೆ? ಅದನ್ನು ನಿಯೋಜಿತ ಅಧಿಕಾರಿ ನಡೆಸುವರು.

ತಾಲ್ಲೂಕು ಪಂಚಾಯಿತಿ ಸಮಿತಿ

ಮಂಡಳ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತಿನ ನಡುವೆ ತಾಲ್ಲೂಕು ಪಂಚಾಯಿತಿ ಸಮಿತಿ ಇದೆ. ಅದರ ರಚನೆ ಹೀಗಿದೆ :

Sri Vidyabharathi Book Centre, Sringeri

CC-O. In Public Domain. Digitized by eGangotri

1. ಆಯಾ ತಾಲ್ಲೂಕಿನ ವಿಧಾನಸಭಾ ಸದಸ್ಯರು ;

2. ಆಯಾ ತಾಲ್ಲೂಕಿನಲ್ಲಿ ವಾಸ ಮಾಡುವ ವಿಧಾನ ಪರಿಷತ್ತಿನ ಸದಸ್ಯರು ;

3. ಮಂಡಳ ಪಂಚಾಯಿತಿ ಪ್ರಧಾನರು ;

4. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು;

5. ತಾಲ್ಲೂಕು ವ್ಯವಸಾಯ ಉತ್ಪಾದನಾ ಮಾರುಕಟ್ಟೆ ಸಹಕಾರ ಸಂಘದ ಅಧ್ಯಕ್ಷರು ;

6. ಐದುಮಂದಿ ಕೋಆಪ್ಟ್ ಆದ ಸದಸ್ಯರು : ಅವರು ಹರಿಜನ, ಗಿರಿಜನ, ಹಿಂದುಳಿದ ವರ್ಗ ಮತ್ತು ಮಹಿಳೆಯರು;

7. ಆಯಾ ತಾಲ್ಲೋಕಿನ ಜಿಲ್ಲಾ ಪರಿಷತ್ ಸದಸ್ಯರು.

ತಾಲ್ಲೂಕಿನ ವಿಧಾನಸಭಾ ಸದಸ್ಯರು ಆ ತಾಲ್ಲೂಕಿನ ಮಂಡಲ ಪಂಚಾಯಿತದ ಪ್ರಧಾನರಾಗಿರುತ್ತಾರೆ.

ತಾಲ್ಲೂಕು ಪಂಚಾಯಿತಿಯ ಅಧಿಕಾರ

1. ತಾಲ್ಲೂಕು ಪಂಚಾಯಿತಿಗಳಿಗೆ ಅಷ್ಟಾಗಿ ಅಧಿಕಾರ ವಿಲ್ಲ. ಅವುಗಳ ಕಾರ್ಯ ಕೇವಲ ಮೇಲ್ವಿಚಾರಣೆ, ಪರಿಶೀಲನೆ ಮತ್ತು ಸಮನ್ವಯ ಕಾರ್ಯ ;

2. ಆಯಾ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸುವ ಜಿಲ್ಲಾ ಪರಿಷತ್ ಅಧಿಕಾರಿಗಳ ಕೆಲಸದ ಉಸ್ತುವಾರಿ ;

3. ಆಯಾ ತಾಲ್ಲೂಕಿನಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನೆ ;

4. ಮಂಡಳ ಪಂಚಾಯಿತಿ ಕಾರ್ಯಕ್ರಮಗಳ ಪರಿಶೀಲನೆ ;

Sri Vidyabharathi Book Centre, Sringeri

CC-O. In Public Domain. Digitized by eGangotri



5. ವಿವಿಧ ಮಂಡಳಗಳ ಮಧ್ಯೆ ಸಮನ್ವಯತೆ ಉಂಟು ಮಾಡುವುದು.

* * *

“ಈಗ ಮಂಡಳ ಪಂಚಾಯಿತಿಗಳ ಪೂರ್ಣ ವಿವರ ತಿಳಿ ಯಿತು. ತಾಲ್ಲೂಕು [illegible] ಅಧಿಕಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲ. ಜಿಲ್ಲೆಯ ಅಭಿವೃದ್ಧಿಗೆ ಆಗಿರುವ ವ್ಯವಸ್ಥೆ ಏನು ?"

"ಅದನ್ನು ಈಗ ತಿಳಿಸುತ್ತೇನೆ. ಮಂಡಳ ಪಂಚಾಯಿತಿ ತನ್ನ ಕ್ಷೇತ್ರದ ಅಭಿವೃದ್ಧಿಯನ್ನು ನೋಡಿಕೊಳ್ಳುವುದು. ನೀವು ಹೇಳಿದಂತೆ ತಾಲ್ಲೂಕು ಪಂಚಾಯಿತಿಗಳಿಗೆ ಅಷ್ಟಾಗಿ ಅಧಿಕಾರವಿಲ್ಲ. ಇಡೀ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಾರ್ಯದ ಮೇಲ್ವಿಚಾರಣೆಗೆ ಸೀಮಿತ. ಅಂತೆಯೇ ಇಡೀ ಜಿಲ್ಲೆಯ ಅಭಿವೃದ್ಧಿಯನ್ನು ಸಾಧಿಸಲು ಜಿಲ್ಲಾ ಪರಿಷತ್ ವ್ಯವಸ್ಥೆ ಇದೆ. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಪುರಸಭೆ ಮತ್ತು ಕಾರ್ಪೊರೇಷನ್‌ಗಳು ಬರುವುದಿಲ್ಲ.

ಜಿಲ್ಲಾ ಪರಿಷತ್ತಿನ ರಚನೆ

ಬದಲಾಗುವ ಜನಸಂಖ್ಯೆಗೆ ಅನುಗುಣವಾಗಿ ಜಿಲ್ಲಾ ಪರಿಷತ್ತಿನ ಸದಸ್ಯರ ಸಂಖ್ಯೆ ನಿಗದಿ ಆಗುವುದು. ಜನಸಂಖ್ಯೆ ಎಷ್ಟೆಂಬುದನ್ನು ನಿರ್ಧರಿಸುವುದು ಪ್ರತಿ ಹತ್ತು ವರ್ಷಕ್ಕೆ ಒಮ್ಮೆ ಜನಗಣತಿ ಆದಾಗ.

ಜಿಲ್ಲಾ ಪರಿಷತ್ತಿನಲ್ಲಿ ಮೂರು ಬಗೆಯ ಸದಸ್ಯರಿರುವರು: 1. ಚುನಾಯಿತ ಸದಸ್ಯರು. 2. ಅಸೋಸಿಯೇಟ್ ಸದಸ್ಯರು. 3. ನಾಮಕರಣ ಸದಸ್ಯರು.

ಅ) ಜಿಲ್ಲಾ ಪರಿಷತ್ತಿನ ಕ್ಷೇತ್ರ ಏಕಸದಸ್ಯ ಚುನಾವಣಾ ಕ್ಷೇತ್ರ.

ಆ) ಮಹಿಳೆಯರಿಗೆ ಮೀಸಲಾತಿ. ಮೀಸಲಾತಿ ಪ್ರಮಾಣ ಶೇಕಡ 25.

Sri Vidyabharathi Book Centre, Sringeri

CC-O. In Public Domain. Digitized by eGangotri

ಇ) ಹರಿಜನ, ಗಿರಿಜನರಿಗೆ ಮೀಸಲಾತಿ ಉಂಟು. ಅದು ಅವರ ಜನಸಂಖ್ಯೆಯ ಪ್ರಮಾಣ ಅನುಸರಿಸಿದೆ. ಏನಾದರೂ ಆಗಲಿ; ಈ ವರ್ಗದವರಿಗೆ ತಾಲ್ಲೂಕಿಗೆ ಒಂದು ಸ್ಥಾನ. ಈ ವರ್ಗದವರು ಮತ್ತು ಮಹಿಳೆಯರು ಸಾಮಾನ್ಯ ಕ್ಷೇತ್ರ ದಿಂದ ನಿಲ್ಲಬಹುದು.

ಈ) ಚುನಾವಣೆಗೆ ನಿಲ್ಲಲು ಉಮೇದುವಾರನ ಹೆಸರು ಜಿಲ್ಲಾ ಪರಿಷತ್ ಮತದಾರರ ಪಟ್ಟಿಯಲ್ಲಿ ಇರಬೇಕು. ಮತದಾರನ ವಯಸ್ಸು 18. ಚುನಾವಣೆಗೆ ನಿಲ್ಲುವ ವಯಸ್ಸು 25.

ಜಿಲ್ಲಾ ಪರಿಷತ್ತಿನ ಸದಸ್ಯತ್ವ

1. ಜಿಲ್ಲೆಯ ಪ್ರತಿ 28,000 ಜನಸಂಖ್ಯೆಗೆ ಒಬ್ಬ ಚುನಾಯಿತ ಪ್ರತಿನಿಧಿ ;

2. ಜಿಲ್ಲಾ ಕೇಂದ್ರ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ. ಇವರು ಸಭೆಯ ಕಾರ್ಯಕಲಾಪಗಳಲ್ಲಿ ಪಾಲುಗೊಳ್ಳ ಬಹುದು. ಆದರೆ ಮತದಾನ ಮಾಡುವಂತಿಲ್ಲ. ಇವರು ಅಸೋಸಿಯೇಟ್ ಸದಸ್ಯರು ;

3. ಆಯಾ ಜಿಲ್ಲೆಯ ಲೋಕಸಭೆ ಮತ್ತು ವಿಧಾನಸಭೆ ಸದಸ್ಯರು ; Sri Vidyabharathi Book Centre, Sringeri

CC-O. In Public Domain. Digitized by eGangotri

4. ಆಯಾ ಜಿಲ್ಲೆಯಲ್ಲಿ ವಾಸಿಸುವ ವಿಧಾನಪರಿಷತ್ತಿನ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು. 3 ಮತ್ತು 4 ರಲ್ಲಿ ಸೂಚಿತರಾದವರು ಸಭೆಯಲ್ಲಿ ಭಾಗವಹಿಸಿ ಮತದಾನ ಮಾಡಬಹುದು. ಆದರೆ ಅಧ್ಯಕ್ಷತೆ ಮತ್ತು ಉಪಾಧ್ಯಾಕ್ಷ ಪದವಿ ಅಂಗೀಕರಿಸುವಂತಿಲ್ಲ.

ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಚುನಾವಣೆ

ಜಿಲ್ಲಾ ಪರಿಷತ್ತಿನ ಸದಸ್ಯರ ಅವಧಿ 5 ವರ್ಷ. ಅಂತೆಯೇ ಆಯ್ಕೆ ಆದ ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಅವಧಿ ಕೂಡ ಐದು ವರ್ಷಗಳು. 2/3 ಭಾಗ ಸದಸ್ಯರು ಅವಿಶ್ವಾಸ ಸೂಚಿಸಿದಲ್ಲಿ ಪದವಿ ಹೋಗುವುದು (ಯಾರ ಮೇಲೆ ಅವಿಶ್ವಾಸ ನಿರ್ಣಯಪಾಸಾಗಿದೆಯೋ ಅವರ ಪದವಿ).ಎರಡನೆಯದಾಗಿ ಅವರ ನಡವಳಿಕೆ ಸರಿ ಆಗಿಲ್ಲದಿರಬಹುದು (Misconduct). ಅಥವಾ ಕೆಲಸದಲ್ಲಿ ಒಂದೇ ಸಮನೆ ಅಲಕ್ಷ್ಯತೋರಬಹುದು. ಆಗ ಸರಕಾರ ಅಂತಹವರನ್ನು ತೆಗೆದುಹಾಕಬಹುದು.

ಜಿಲ್ಲಾ ಪರಿಷತ್ತಿನ ಸದಸ್ಯರು ತಮ್ಮತಮ್ಮಲ್ಲೇ ಒಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಆರಿಸುವರು. ಚುನಾವಣೆಗೆ ನಿಲ್ಲುವವರ ವಯಸ್ಸು 30 ಆಗಿರಬೇಕು. ಲೋಕಸಭೆ,ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಚುನಾವಣೆಗೆ ನಿಲ್ಲುವಂತಿಲ್ಲ.

ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ರಾಜ್ಯ ಸಚಿವರಿಗೆ ಕೊಡುವಷ್ಟು ಸಂಬಳ. ಉಪಾಧ್ಯಕ್ಷರ ಸಂಬಳ ಡೆಪ್ಯುಟಿ ಮಂತ್ರಿಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಬಳಕ್ಕೆ ಸಮಾನ. ಸರಕಾರದ ಕಾನೂನಿನ ಪ್ರಕಾರ ಇತರ ಭತ್ಯಗಳು.

ಅಧ್ಯಕ್ಷರು ಜಿಲ್ಲಾ ಪರಿಷತ್ತಿನ ಮುಖ್ಯಸ್ಥರು. ಅವರು ತಮಗೆ ನಿಗದಿ ಆದ ಅಧಿಕಾರ ಚಲಾಯಿಸುವರು.

ಜಿಲ್ಲಾ ಪರಿಷತ್ತು ಕನಿಷ್ಠ ತಿಂಗಳಿಗೆ ಒಂದು ಬಾರಿ ಸಭೆ ಸೇರಬೇಕು. ಸಭೆಗೆ ಸದಸ್ಯರು ಗೈರುಹಾಜರಾಗಲು ಪೂರ್ವ ಭಾವಿಯಾಗಿ ಜಿಲ್ಲಾ ಪರಿಷತ್ತಿನ ಅನುಮತಿ ಪಡೆಯಬೇಕು. ಇಲ್ಲದಿದ್ದರೆ ಅವರು ತಮ್ಮ ಅಧಿಕಾರ ಕಳೆದುಕೊಳ್ಳುವರು.

ಜಿಲ್ಲಾ ಪರಿಷತ್ತಿನ ಆಡಳಿತ ನೋಡಿಕೊಳ್ಳುವವರು ಒಬ್ಬರು ಪ್ರಧಾನ ಕಾರ್ಯದರ್ಶಿ. ಅವರು ಜಿಲ್ಲಾಧಿಕಾರಿಗಳ ಮಟ್ಟದ ಹುದ್ದೆಯವರು. ಅವರನ್ನು ಮತ್ತು ಇತರ ಮುಖ್ಯ ಸಿಬ್ಬಂದಿಯನ್ನು ಸರಕಾರ ನಿಯೋಜಿಸುವುದು.

ಜಿಲ್ಲಾ ಪರಿಷತ್ತಿನ ಹೊಣೆ

ಅ) ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ವಿವಿಧ ಯೋಜನೆಗಳ ರಚನೆ ಮತ್ತು ನಿರ್ವಹಣೆ, ಮೇಲ್ವಿಚಾರಣೆ ಮತ್ತು ಕಾರ್ಯ ನಿರ್ವಹಣೆಯಲ್ಲಿ ಸಮನ್ವಯತೆ ಉಂಟು ಮಾಡುವುದು ;

ಆ) ವ್ಯವಸಾಯ ಮತ್ತು ಹೈನುಗಾರಿಕೆ ಅಭಿವೃದ್ಧಿ ;

ಇ) ವ್ಯವಸಾಯಕ್ಕೆ ಬೇಕಾದ ಬೀಜ ಸಂರಕ್ಷಣಾ ಕೇಂದ್ರಗಳನ್ನು ತೆರೆಯುವುದು ಮತ್ತು ನಿರ್ವಹಣೆ ;

ಈ) ವ್ಯವಸಾಯದ ಶಾಲೆಗಳ ನಿರ್ಮಾಣ ;

ಉ) ಆಸ್ಪತ್ರೆಗಳ ನಿರ್ಮಾಣ ಮತ್ತು ಆರೋಗ್ಯ ರಕ್ಷಣೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕಾದ ಯೋಜನೆಗಳನ್ನು ಕಾರ್ಯಗತ ಮಾಡುವುದು ;

ಊ) ನೀರಾವರಿ ಮತ್ತು ತೋಟಗಾರಿಕೆ ;

ಋ) ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ ;

ೠ) ಶಿಕ್ಷಣ ಕಾರ್ಯಕ್ರಮಗಳು.

ಈ ಕಾರ್ಯಗಳನ್ನು ನಿರ್ವಹಿಸಲು ತಜ್ಞ ಅಧಿಕಾರಿಗಳ ನೆರವು ಉಂಟು. ಜಿಲ್ಲಾ ಅಭಿವೃದ್ಧಿ ಯೋಜನೆಗಳ ತಯಾರಿಕೆ ಮತ್ತು ನಿರ್ವಹಣೆ ಜಿಲ್ಲಾ ಪರಿಷತ್ತಿನ ಮುಖ್ಯ ಹೊಣೆ. ಆದ್ದರಿಂದ ಈಗಿರುವ ಜಿಲ್ಲಾ ಯೋಜನಾ ಘಟಕಗಳು ರದ್ದಾಗುವುವು. ಆ ಸಿಬ್ಬಂದಿ ಜಿಲ್ಲಾ ಪರಿಷತ್ತಿನ ಆಶ್ರಯದಲ್ಲಿ ಕೆಲಸ ಮಾಡುವುವು.

ಜಿಲ್ಲಾ ಪರಿಷತ್ತು ತನ್ನ ಆಡಳಿತ ಸೌಕರ್ಯಕ್ಕಾಗಿ ಒಂಬತ್ತು ಸ್ಥಾಯಿ ಸಮಿತಿಗಳನ್ನು ಹೊಂದಿರುವುದು. ಇದಲ್ಲದೆ ಅವಶ್ಯಕತೆ ಬಿದ್ದಾಗ ಸಮಿತಿಗಳನ್ನು ಜಿಲ್ಲಾ ಪರಿಷತ್ತು ರಚಿಸಬಹುದು. ಅವು ತಮಗೆ ವಹಿಸಿದ ಕಾರ್ಯಕ್ರಮಗಳನ್ನು ನಿರ್ವಹಿಸಿದ ನಂತರ ರದ್ದಾಗುವುವು.

ಸಮಿತಿಯ ಸದಸ್ಯರ ಆಯ್ಕೆ ಮತ್ತು ಅವರ ನಡುವಳಿಕೆ ಬಗ್ಗೆ ಸೂಕ್ತ ನಿಯಮಗಳನ್ನು ರಚಿಸುವುದು ಜಿಲ್ಲಾ ಪರಿಷತ್ತಿನ ಹೊಣೆ.

ಪ್ರತಿಯೊಂದು ಸಮಿತಿಯ ಅಧ್ಯಕ್ಷರು ತಮಗೆ ಬೇಕಾದ ಮಾಹಿತಿಗಳನ್ನು ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಅಧಿಕಾರ ಪಡೆದಿರುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವಿಧ ಸಮಿತಿಗಳು ಹೀಗಿವೆ:

ಅ) ಸಾಮಾನ್ಯ ವ್ಯವಹಾರ ಸಮಿತಿ ;

ಆ) ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸಮಿತಿ ;

ಇ) ಯೋಜನೆ ಮತ್ತು ಅಭಿವೃದ್ಧಿ ಸಮಿತಿ ;

ಈ) ಲೋಕೋಪಯೋಗಿ ಮತ್ತು ಇತರ ಸೌಕರ್ಯಗಳ ಸಮಿತಿ ;

ಉ) ಸಾಮಾಜಿಕ ನ್ಯಾಯ ಸಮಿತಿ-(ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳ ಏಳಿಗೆಯನ್ನು ಕೋರುವುದು)

ಊ) ಶಿಕ್ಷಣ ಸಮಿತಿ ;

ಋ) ವ್ಯವಸಾಯ ಮತ್ತು ಇತರ ಸೌಕರ್ಯಗಳ ಸಮಿತಿ ;

ೠ) ಆರೋಗ್ಯ ಸಮಿತಿ ;

ಎ) ಕೈಗಾರಿಕಾ ಸಮಿತಿ.

ಜಿಲ್ಲಾ ಪರಿಷತ್ತು ಸ್ಥಾಯಿಸಮಿತಿಯ ಸದಸ್ಯರನ್ನು ಆಯ್ಕೆ ಮಾಡುತ್ತದೆ. ಸಮಿತಿಯ ಸದಸ್ಯರ ಸಂಖ್ಯೆ ಆರಕ್ಕೆ ಸೀಮಿತ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸಾಮಾನ್ಯ ವ್ಯವಹಾರ ಸಮಿತಿ ಉಳಿದು ಮಿಕ್ಕೆಲ್ಲ ಸಮಿತಿಗಳ ಸದಸ್ಯರು. ಉಪಾಧ್ಯಕ್ಷರು ಸಾಮಾನ್ಯ ವ್ಯವಹಾರ ಸಮಿತಿಯ ಅಧ್ಯಕ್ಷರು ಮತ್ತು ಉಳಿದ ಸಮಿತಿಗಳ ಸದಸ್ಯರು.

ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿ ಎಲ್ಲ ಸಮಿತಿಗಳ ಕಾರ್ಯದರ್ಶಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಣಕಾಸಿನ ವ್ಯವಸ್ಥೆ

ಜಿಲ್ಲಾ ಪರಿಷತ್ ಹಲವಾರು ಕೆಲಸಗಳನ್ನು ಮಾಡಬೇಕು. ಅದಕ್ಕೆ ಹಣ ಬೇಡವೆ? ಅದಕ್ಕಾಗಿ ಪ್ರತಿಯೊಂದು ಜಿಲ್ಲಾ ಪರಿಷತ್ತಿಗೆ "ಜಿಲ್ಲಾ ಪರಿಷತ್ ನಿಧಿ" ಇದೆ. ಅದರ ಹಣ ಜಿಲ್ಲಾ ಸರಕಾರಿ ಖಜಾನೆಯಲ್ಲಿ ಇರುವುದು.

ಜಿಲ್ಲಾ ಪರಿಷತ್ತಿನ ವರಮಾನ ಹೀಗಿದೆ :

ಅ) ರಾಜ್ಯನಿಧಿಕೋಶದಿಂದ ಜಿಲ್ಲಾ ಪರಿಷತ್ ನಿಧಿಗೆ ವರ್ಗಾಯಿಸುವ ಹಣ ;

ಆ) ಸರಕಾರ ನೀಡುವ ಅನುದಾನ, ವಂತಿಕೆಗಳು, ಸಾಲ ಇತ್ಯಾದಿ ;

ಇ) ಜಿಲ್ಲಾ ಪರಿಷತ್ ಕಾನೂನಿನ ರೀತ್ಯಾ ಎಲ್ಲ ರೀತಿಯ ಫೀ ಮತ್ತು ಜುಲ್ಮಾನೆಯಿಂದ ವಸೂಲಾಗುವ ಹಣ ;

ಈ) ಜಿಲ್ಲಾ ಪರಿಷತ್ತಿನ ಆಸ್ತಿಪಾಸಿಯಿಂದ ಬರುವ ಆದಾಯ ;

ಉ) ಎಲ್ಲ ರೀತಿಯ ಬಡ್ಡಿ ಹಣ, ಲಾಭ ಮತ್ತು ಇತರ ರೀತಿಯಲ್ಲಿ ಜಮಾ ಆಗುವ ಹಣ, ಅಂದರೆ ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ನೀಡುವ ಹಣ ಇತ್ಯಾದಿ ;

ಊ) ಜಿಲ್ಲಾ ಪರಿಷತ್ ಮಾರಬಹುದಾದ ಆಸ್ತಿ, ಸೆಕ್ಯೂರಿಟಿ ಮುಂತಾದ ಬಾಬುಗಳು ;

ಋ) ಕಾನೂನಿನ ಪ್ರಕಾರ ಪರಿಷತ್ತಿಗೆ ಬರುವ ಹಣ.

ಜಿಲ್ಲಾ ಪರಿಷತ್ ಕಾನೂನು ಜಾರಿಗೆ ಬರುವುದಷ್ಟೆ. ಅಂದಿನಿಂದ ಪ್ರತಿಯೊಂದು ಜಿಲ್ಲಾ ಪರಿಷತ್ತಿಗೆ ಎರಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಟಿ ರೂಪಾಯಿ ಹಣವನ್ನು ಸರಕಾರ ನಿಗದಿ ಮಾಡು ವುದು.

ಕಾಲ ಮುಂದುವರಿದಂತೆ ಜಿಲ್ಲಾ ಪರಿಷತ್ತಿಗೆ ಬೇಡಿಕೆ ಗಳು ಹೆಚ್ಚಬಹುದು. ಅಂತೆಯೇ ಅದರ ವರಮಾನವೂ ಹೆಚ್ಚಬೇಡವೆ ? ಅದರಿಂದ ಸರ್ಕಾರ ಆಗಾಗ್ಗೆ ಹಣಕಾಸಿನ ಆಯೋಗ ರಚಿಸುವುದು. ಅದು ಆದಾಯದ ಮೂಲಗಳನ್ನು ಮತ್ತು ವೆಚ್ಚದ ಬಾಬುಗಳನ್ನು ಪರಿಶೀಲಿಸುವುದು. ಅನಂತರ ಸರ್ಕಾರಕ್ಕೆ ಸೂಕ್ತ ಶಿಫಾರಸು ಮಾಡುವುದು. ಈ ಶಿಫಾರಸುಗಳನ್ನು ಅಂಗೀಕರಿಸುವುದು ಸರ್ಕಾರಕ್ಕೆ ಸೇರಿದ್ದು. ಸರಕಾರ ಹಾಗೆಯೇ ಒಪ್ಪಬಹುದು. ಇಲ್ಲವೆ ಕೆಲವು ಮಾರ್ಪಾಡುಗಳೊಡನೆ ಅಂಗೀಕರಿಸಬಹುದು.

ಉಮೇದುವಾರರು ಮತ್ತು ಚುನಾವಣೆ

ಜಿಲ್ಲಾ ಪರಿಷತ್ತಿನ ಮತದಾರರ ಪಟ್ಟಿಯಲ್ಲಿ ಹೆಸರು ಇರುವವರು ಮತದಾನ ಮಾಡಲು ಅರ್ಹರು. 25 ವಯಸ್ಸಾಗಿರುವವರು ಚುನಾವಣೆಗೆ ನಿಲ್ಲಬಹುದು.

ಪ್ರತಿ ಮಂಡಳ ಪಂಚಾಯಿತಿಯು ಮತದಾರರ ಪಟ್ಟಿಯನ್ನು ಆಯಾ ಪಂಚಾಯಿತಿ ಕಛೇರಿಯಲ್ಲಿ ಇಡತಕ್ಕದ್ದು.

ಚುನಾವಣೆಗೆ ನಿಲ್ಲುವ ಉಮೇದುವಾರ ಆಯಾ ಕ್ಷೇತ್ರ ದಲ್ಲೇ ವಾಸವಾಗಿರಬೇಕು. ಅಂದರೆ ಯಾವ ಕ್ಷೇತ್ರದ ಮತ ದಾರರ ಪಟ್ಟಿಯ ಹೆಸರು ಇರುವುದೋ ಅಲ್ಲಿ.

Sri Vidyabharathi Book Centre, Sringeri.

CC-O. In Public Domain. Digitized by eGangotri

25 ವಯಸ್ಸಿಗೆ ಕಡಿಮೆ ಇದ್ದವರು ಚುನಾವಣೆಗೆ ನಿಲ್ಲುವಂತಿಲ್ಲ. ಮತದಾರನ ಹೆಸರು ಇರುವ ಕ್ಷೇತ್ರದಲ್ಲಿ ವಾಸವಾಗಿಲ್ಲದಿದ್ದರೆ ಆತ ಆ ಕ್ಷೇತ್ರದಿಂದ ಚುನಾವಣೆಗೆ ನಿಲ್ಲುವಂತಿಲ್ಲ.

ಸರಕಾರದ ಸೇವೆಯಿಂದ ವಜಾ ಆದವರು ಚುನಾವಣೆಗೆ ನಿಲ್ಲುವಂತಿಲ್ಲ. ಚುನಾವಣೆ 1951ರ ಪ್ರಜಾಪ್ರತಿನಿಧಿ ಕಾಯ್ದೆಯ ಪ್ರಕಾರ ಚುನಾವಣಾ ತಕರಾರುಗಳನ್ನು ಮುನ್ಸಿಫ್ ನ್ಯಾಯಾಧೀಶರು ಇತ್ಯರ್ಥ ಮಾಡುವರು.

ಮಂಡಳ ಪಂಚಾಯಿತಿ ಸಭೆಗಳು

ಮಂಡಳ ಪಂಚಾಯಿತಿ ರಚನೆಯಾದ ಒಂದು ವಾರದೊಳಗೆ ಸಭೆ ಸೇರತಕ್ಕದ್ದು. ಆ ಸಭೆಯಲ್ಲಿ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ನಡೆಯತಕ್ಕದ್ದು.

ಪ್ರಧಾನರಿಗೆ ಮಾಸಿಕ ಸಂಬಳ 300 ರೂ.ಗಳು. ಉಪಪ್ರಧಾನರ ಸಂಬಳ 150 ರೂ.ಗಳು. ಮಂಡಳ ಪಂಚಾಯಿತಿ ಕಡೆಯ ಪಕ್ಷ ತಿಂಗಳಿಗೆ ಒಮ್ಮೆ ಸಭೆ ಸೇರಬೇಕು. ಅಂತಹ ಸಭೆ ಮಂಡಳ ಪಂಚಾಯಿತಿ ಕಛೇರಿಯಲ್ಲಿ ನಡೆಯತಕ್ಕದ್ದು.

ಸಭೆಯ ಅಧ್ಯಕ್ಷತೆಯನ್ನು ಪ್ರಧಾನರು ವಹಿಸುವರು. ಅವರ ಗೈರುಹಾಜರಿಯಲ್ಲಿ ಉಪಪ್ರಧಾನರು ಅಧ್ಯಕ್ಷತೆ ವಹಿಸುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಸ್ಯತ್ವ ರದ್ದು

ಸದಸ್ಯರು ಪೂರ್ವಭಾವಿಯಾಗಿ ಒಪ್ಪಿಗೆ ಇಲ್ಲದೆ ಸತತವಾಗಿ ಮೂರು ಸಭೆಗಳಿಗೆ ಗೈರುಹಾಜರಾಗುವಂತಿಲ್ಲ. ಹಾಗೆ ಆದಲ್ಲಿ ಅವರ ಸದಸ್ಯತ್ವ ರದ್ದಾಗುವುದು.

ಸದಸ್ಯರು ಸತತವಾಗಿ ತಮ್ಮ ಕ್ಷೇತ್ರದಿಂದ ನಾಲ್ಕು ತಿಂಗಳು ಹೊರಗೆ ಇರುವಂತಿಲ್ಲ. ಹಾಗಿದ್ದಲ್ಲಿ ಅವರ ಸದಸ್ಯತ್ವ ರದ್ದಾಗುವುದು.

ಪ್ರಧಾನರು ಮತ್ತು ಉಪಪ್ರಧಾನರು

ಪ್ರಧಾನ ಮತ್ತು ಉಪಪ್ರಧಾನರು ಭ್ರಷ್ಟಾಚಾರದ ಆಪಾದನೆಗೆ ಒಳಗಾಗಬಹುದು. ಅಥವಾ ಅಕ್ರಮ ನಡವಳಿಕೆಯ ಆರೋಪಕ್ಕೆ ಗುರಿ ಆಗಬಹುದು. ಅವು ರುಜುವಾತಾದಲ್ಲಿ ಅವರನ್ನು ಜಿಲ್ಲಾಧಿಕಾರಿಗಳು ತೆಗೆದು ಹಾಕಬಹುದು.

ಪ್ರಧಾನ ಮತ್ತು ಉಪಪ್ರಧಾನರಿಗೆ ಒಂದು ತಿಂಗಳಿಗೆ ಕಡಿಮೆ ಇಲ್ಲದೆ ಜೈಲು ಶಿಕ್ಷೆ ಆಗಬಹುದು. ಆಗ ಅವರನ್ನು ಜಿಲ್ಲಾಧಿಕಾರಿಗಳು ಅಮಾನತ್ತಿನಲ್ಲಿ ಇಡಬಹುದು.

ಪ್ರಧಾನ ಮತ್ತು ಉಪಪ್ರಧಾನರ ಮೇಲೆ ಸದಸ್ಯರು ಅವಿಶ್ವಾಸ ನಿರ್ಣಯ ತರಲು ಇಚ್ಛಿಸಬಹುದು. ಆಗ ಸದಸ್ಯರ ಪೈಕಿ ಅರ್ಧಕ್ಕಿಂತ ಕಡಮೆ ಇಲ್ಲದಷ್ಟು ಮಂದಿ ಬರವಣಿಗೆಯಲ್ಲಿ ಅವಿಶ್ವಾಸ ನಿರ್ಣಯದ ನೋಟೀಸನ್ನು ಜಿಲ್ಲಾಧಿಕಾರಿಗಳಿಗೆ ಕೊಡಬಹುದು. ಜಿಲ್ಲಾಧಿಕಾರಿಗಳು ಸಭೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕರೆಯುವರು. ಅವರೇ ಅದರ ಅಧ್ಯಕ್ಷತೆ ವಹಿಸುವರು. ಸಭೆಯಲ್ಲಿ ಅವರಿಗೆ ಮಾತನಾಡುವ ಅಥವಾ ಮತದಾನ ಮಾಡುವ ಹಕ್ಕಿಲ್ಲ. ಮೂರರಲ್ಲಿ ಎರಡು ಭಾಗ ಸದಸ್ಯರು ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ನೀಡಿದಲ್ಲಿ ಪ್ರಧಾನರು ಅಥವಾ ಉಪಪ್ರಧಾನರು ತಮ್ಮ ಪದವಿ ಕಳೆದುಕೊಳ್ಳುವರು. (ಯಾರ ಮೇಲೆ ಅವಿಶ್ವಾಸ ನಿರ್ಣಯ ಆಗಿದೆಯೋ ಅವರು ಮಾತ್ರ ತಮ್ಮ ಸ್ಥಾನ ಕಳೆದುಕೊಳ್ಳುವರು.)

ಸದಸ್ಯರಿಗೆ ದಿನಭತ್ಯ

ಮಂಡಳ ಪಂಚಾಯಿತಿ ಸಭೆಗೆ ಹಾಜರಾಗುವ ಸದಸ್ಯರಿಗೆ ದಿನಭತ್ಯ 15 ರೂಪಾಯಿ. ಕೆಲವು ವೇಳೆ ಮಂಡಳ ಪಂಚಾಯಿತಿ ಸಮಿತಿಗಳನ್ನು ರಚಿಸಬಹುದು. ಅಂತಹ ಸಭೆಗಳಿಗೆ ಹಾಜರಿರುವ ಸದಸ್ಯರಿಗೂ ಸಹ ದಿನಭತ್ಯ ಉಂಟು.

ಮಂಡಳ ಪಂಚಾಯಿತಿಯ ಅಧಿಕಾರ ಮತ್ತು ಕರ್ತವ್ಯಗಳು

ಮಂಡಳ ಪಂಚಾಯಿತಿಗೆ ಸಾಕಷ್ಟು ಹೊಣೆ ಇದೆ. ಅವು ಮೂರು ಬಗೆ: 1. ಕೆಲವು ಮಾಡಲೇಬೇಕಾದ ಕರ್ತವ್ಯಗಳು. 2. ಕೆಲವು ಕಾರ್ಯಕ್ರಮಗಳು ಮಂಡಳ ಪಂಚಾಯಿತಿಯ ಇಚ್ಛೆಗೆ ಬಿಟ್ಟದ್ದು. 3. ಸರಕಾರದಿಂದ ವಹಿಸಲ್ಪಟ್ಟ ಮತ್ತು ವರ್ಗಾಯಿಸುವ ಕರ್ತವ್ಯಗಳು. ಮಂಡಳ ಪಂಚಾಯಿತಿಗಳಿಗೆ ಕೆಲಸ ಹೆಚ್ಚು. ಆದರೆ ಸಂಪನ್ಮೂಲಗಳು ಕಡಮೆ. ಹೆಚ್ಚಿನ ಆದಾಯದ ಮೂಲ ಸರಕಾರ. ಆದ್ದರಿಂದ ಮಂಡಳ

Sri Vidyabharathi Book Centre, Sringeri

CC-O. In Public Domain. Digitized by eGangotri



ಮಂಡಳ ಪಂಚಾಯಿತಿ, ಹೊಣೆ

ಪಂಚಾಯಿತಿಗಳು ತಮ್ಮ ವರಮಾನಕ್ಕೆ ಸೀಮಿತಗೊಳಿಸ ಬೇಕು. ಇಲ್ಲವೆ ಜನರ ಉತ್ಸಾಹವನ್ನು ಊರಿನ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲು ಪ್ರಯತ್ನಿಸತಕ್ಕದ್ದು. ಈಗ ಮಂಡಳ ಪಂಚಾಯಿತಿಯ ಹೊಣೆ ಏನೆಂಬುದನ್ನು ತಿಳಿಯೋಣ.

Sri Vidyabharathi Book Centre, Sringeri

CC-O. In Public Domain. Digitized by eGangotri

1. ಆರೋಗ್ಯ ಮತ್ತು ಗ್ರಾಮನೈರ್ಮಲ್ಯ

ಮೊಟ್ಟಮೊದಲನೆಯ ಕಾರ್ಯ ಗ್ರಾಮನೈರ್ಮಲ್ಯ ಮತ್ತು ಗ್ರಾಮೀಣರ ಆರೋಗ್ಯ ರಕ್ಷಣೆ. ನೀರಿನ ಸರಬರಾಜು ಅಷ್ಟೇ ಮುಖ್ಯ.

1. ಸಾರ್ವಜನಿಕರ ಕೆರೆ, ಕೊಳ ಮತ್ತು ಭಾವಿಗಳ ನಿರ್ಮಾಣ ಮತ್ತು ದುರಸ್ತಿ ; ಮನೆಗಳಿಗೆ, ದನಗಳಿಗೆ ಮತ್ತು ಸಾರ್ವಜನಿಕ ಕಾರ್ಯಗಳಿಗೆ ನೀರಿನ ಸರಬರಾಜು ಅಗತ್ಯ.

2. ಗಾಮನೈರ್ಮಲ್ಯ ಕಾಪಾಡುವುದು ;

3. ಸಾರ್ವಜನಿಕ ಕಕ್ಕಸ್ಸುಗಳ ನಿರ್ಮಾಣ ;

4. ವಾರಸುದಾರರಿಲ್ಲದ ಶವ ಮತ್ತು ಸತ್ತ ಪ್ರಾಣಿಗಳ ವಿಲೇವಾರಿ ;

5. ಊರಿನಲ್ಲಿನ ಕಸಕಡ್ಡಿ ಮತ್ತು ಹೊಲಸಿನ ವಿಲೇವಾರಿ ;

6. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ;

7. ಮಾಂಸ, ಮೀನು ಮತ್ತು ಇತರ ಕೊಳೆಯುವಂತಹ ಹಣ್ಣು ಮುಂತಾದ ಆಹಾರಗಳ ಪದಾರ್ಥಗಳ ಮಾರಾಟ ;

8. ಸ್ಮಶಾನಗಳ ಏರ್ಪಾಡು ;

9. ಕಟ್ಟಡ ಮತ್ತು ಅಂಗಡಿ ಮಳಿಗೆಗಳ ನಿರ್ಮಾಣ ;

10. ಮನರಂಜನ ಕಾರ್ಯಕ್ರಮಗಳ ಉಸ್ತುವಾರಿ ;

11. ಅಂಗವಿಕಲರಿಗೆ ಪರಿಹಾರ ;

12. ಇಲಿ ಮತ್ತು ಬೀದಿನಾಯಿಗಳ ನಾಶ ;

13. ಚರ್ಮ ಹದ ಮತ್ತು ತೊಗಲಿಗೆ ಬಣ್ಣ ಹಾಕುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರ್ಯ ನಿಯಮಬದ್ಧವಾಗಿ ನಡೆಯುವಂತೆ ಮಾಡುವುದು ;

14. ಆಕಸ್ಮಿಕ ಬೆಂಕಿಯು ಅನಾಹುತದಿಂದ ಉಂಟಾಗುವ ತೊಂದರೆ ತಪ್ಪಿಸುವುದು ;

15. ಅಪಾಯಕಾರಿ ಮತ್ತು ಸಮಾಜಬಾಹಿರವಾದ ವ್ಯಾಪಾರವನ್ನು ನಿಲ್ಲಿಸುವುದು ;

16. ಸಾರ್ವಜನಿಕ ರಸ್ತೆ, ಚರಂಡಿ, ಕೆರೆ, ಬಾವಿ ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿ ಇಡುವುದು ;

17. ಮಂಡಳ ಪಂಚಾಯಿತಿಯ ವ್ಯಾಪ್ತಿಯಲ್ಲಿ ವಾಸಿಸುವವರಿಗೆ ನಿವೇಶನಗಳನ್ನು ಹಂಚುವುದು ;

2. ಸಾರ್ವಜನಿಕ ಕಾಮಗಾರಿ ಮತ್ತು ಸೌಕರ್ಯಗಳು

1. ಸಾರ್ವಜನಿಕ ರಸ್ತೆ, ಚರಂಡಿ, ಸೇತುವೆ ಮತ್ತು ಬದುಗಳ ನಿರ್ಮಾಣ ಮತ್ತು ದುರಸ್ತಿ ;

2. ಸಾರ್ವಜನಿಕ ರಸ್ತೆ ಮತ್ತು ಇತರ ಪ್ರದೇಶಗಳಲ್ಲಿ ಕಂಡುಬರುವ ಅಡ್ಡಿ ಆತಂಕಗಳನ್ನು ತೆಗೆದುಹಾಕುವುದು ;

3. ಮಂಡಳ ಪಂಚಾಯಿತಿ ಆಶ್ರಯದಲ್ಲಿರುವ ಮತ್ತು ಸರಕಾರದಿಂದ ವರ್ಗಾಯಿಸಲ್ಪಟ್ಟ ಕಟ್ಟಡಗಳ ದುರಸ್ತಿ ;

4. ಹುಲ್ಲುಗಾವಲು ಮತ್ತು ಕುಡಿಯುವ ನೀರಿನ ಕೆರೆ ಮತ್ತು ಬಾವಿಗಳ ರಕ್ಷಣೆ ;

5. ವಿದ್ಯುಚ್ಛಕ್ತಿ ಒದಗಿಸುವುದು ;

6. ಧರ್ಮಶಾಲೆ ಮತ್ತು ಛತ್ರಗಳ ವ್ಯವಸ್ಥೆ ;

7. ಮಾರುಕಟ್ಟೆಗಳ ನಿರ್ಮಾಣ ಮತ್ತು ಉಸ್ತುವಾರಿ ;

Sri Vidyabharathi Book Centre, Sringeri

CC-O. In Public Domain. Digitized by eGangotri

8. ಮರಗಳನ್ನು ನೆಡುವುದು ಮತ್ತು ರಕ್ಷಣೆ ;

9. ಸಂತೆ, ಜಾತ್ರೆ ಮತ್ತು ಸಾರ್ವಜನಿಕ, ಸಾಂಸ್ಕೃತಿಕ ಹಬ್ಬಗಳ ಆಚರಣೆ ಮತ್ತು ಜಿಲ್ಲಾ ಪರಿಷತ್ತಿನಿಂದ ವಹಿಸಲ್ಪಟ್ಟ ಕಾರ್ಯಕ್ರಮಗಳ ನಿರ್ವಹಣೆ ;

10. ಮಂಡಳ ಪಂಚಾಯಿತಿ ಸಿಬ್ಬಂದಿ ಮತ್ತು ಇತರ ಕಾರ್ಯಕರ್ತರಿಗೆ ಗೃಹ ನಿರ್ಮಾಣ ;

11. ಮಕ್ಕಳಿಗೆ ಆಟದ ಮೈದಾನ ಮತ್ತು ಪಾರ್ಕುಗಳ ನಿರ್ಮಾಣ ;

12. ಉಗ್ರಾಣ, ವ್ಯಾಪಾರದ ಮಳಿಗೆ ಮತ್ತು ಕೇಂದ್ರಗಳನ್ನು ನಿರ್ಮಿಸುವುದು.

3. ವ್ಯವಸಾಯ ಮತ್ತು ಹೈನುಗಾರಿಕೆ

1. ಮಂಡಳ ಪಂಚಾಯಿತಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೃಷಿ ಉತ್ಪಾದನಾ ಯೋಜನೆಯನ್ನು ತಯಾರಿಸುವುದು ;

2. ಗ್ರಾಮೀಣ ಏಳಿಗೆ ಮತ್ತು ಅಭಿವೃದ್ಧಿ ;

3. ವ್ಯವಸಾಯ ಅಭಿವೃದ್ಧಿ ;

4. ಕೃಷಿ ಅಭಿವೃದ್ಧಿ ಆಗಲು ಸುಧಾರಿಸಿದ ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ವ್ಯವಸಾಯದ ಉಪಕರಣಗಳ ಮಾರಾಟ ; ಕೃಷಿಯ ಬಗ್ಗೆ ಪ್ರಚಾರ ಮತ್ತು ಪ್ರಾತ್ಯಕ್ಷಿಕೆಗಳ ರಚನೆ ;

5. ಉಗ್ರಾಣ ಮತ್ತು ದಾಸ್ತಾನು ಮಳಿಗೆಗಳ ವ್ಯವಸ್ಥೆ;

6. ದನದ ಕೊಟ್ಟಿಗೆಗಳ ನಿರ್ಮಾಣ ;

Sri Vidyabharathi Book Centre, Sringeri

CC-O. In Public Domain. Digitized by eGangotri

7. ಕಾಂಪೋಸ್ಟ್ ಗುಂಡಿಗಳ ಏರ್ಪಾಡು ;

8. ಉತ್ತಮ ತಳಿ ಅಭಿವೃದ್ಧಿ ;

9. ಮೀನುಗಾರಿಕೆ, ಹಂದಿಸಾಕಣೆ ಮತ್ತು ಕೋಳಿ ಸಾಕಣೆ ಅಭಿವೃದ್ಧಿ.

4. ಪರಿಶಿಷ್ಟ ವರ್ಗ, ಬುಡಕಟ್ಟು ಮತ್ತು ಹಿಂದುಳಿದ ವರ್ಗದವರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಏಳಿಗೆ.

ಅ) ಮೇಲ್ಕಂಡ ವರ್ಗದವರನ್ನು ಶೋಷಣೆಯಿಂದ ವಿಮುಕ್ತಿಗೊಳಿಸುವುದು ;

ಆ) ಮನೆ ಕಟ್ಟಲು ನಿವೇಶನಗಳ ನಿರ್ಮಾಣ ;

5. ಇತರೇ ವಿಷಯುಗಳು

1. ಮಂಡಳ ಪಂಚಾಯಿತಿ ಕ್ಷೇತ್ರದ ಅಭಿವೃದ್ಧಿಗೆ ಯೋಜನೆ ತಯಾರಿಕೆ ;

2. ಸರಕಾರದ ಭೂಸಂರಕ್ಷಣಾ ಕಾರ್ಯಕ್ರಮಗಳಿಗೆ ಸಹಕಾರ ;

3. ವಯಸ್ಕರ ಅಕ್ಷರಪ್ರಚಾರ, ವಾಚನಾಲಯ ಮತ್ತು ಪುಸ್ತಕ ಭಂಡಾರಗಳ ವ್ಯವಸ್ಥೆ ;

4. ಬರಗಾಲ ಮುಂತಾದ ಪ್ರಾಕೃತಿಕ ವಿಕೋಪದಿಂದ ಉಂಟಾಗುವ ಅನಾಹುತಗಳು ಸಂಭವಿಸಿದಾಗ ನೆರವು ;

5. ಸ್ನಾನಘಟ್ಟ ಮತ್ತು ಬಟ್ಟೆ ಒಗೆಯಲು ವ್ಯವಸ್ಥೆ ಮತ್ತು ಮೇಲುಸ್ತುವಾರಿ ;

Sri Vidyabharathi Book Centre, Sringeri

CC-O. In Public Domain. Digitized by eGangotri

6. ಗೃಹಕೈಗಾರಿಕೆಗಳ ಅಭಿವೃದ್ಧಿ ;

7. ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಮತ್ತು ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಕಮಿಷನ್ ಯೋಜನೆಗಳನ್ನು ಕಾರ್ಯಗತಮಾಡುವುದು ;

8. ಗ್ರಾಮೀಣ ಸೇವೆ ಸಲ್ಲಿಸಲು ಸ್ವಯಂಸೇವಕರ ತಂಡದ ನಿರ್ಮಾಣ ;

9. ಅಲ್ಪಸಂಖ್ಯಾತ ಧಾರ್ಮಿಕ ಸಂಸ್ಥೆಗಳ ವ್ಯವಸ್ಥೆ ;

10. ಸಹಕಾರ ಸಂಘಗಳ ಬೆಳವಣಿಗೆ ಮತ್ತು ಅಭಿವೃದ್ಧಿ;

11. ಗ್ರಾಮದ ಅಂಕಿಅಂಶಗಳ ಸಂಗ್ರಹ ;

12. ರಾತ್ರಿಕಾವಲು ಮತ್ತು ಬೆಳೆಗಳ ರಕ್ಷಣೆಗೆ ಕಾವಲು ವ್ಯವಸ್ಥೆ ;

13. ಗ್ರಾಮೀಣ ಅರಣ್ಯಗಳ ಸ್ಥಾಪನೆ ಮತ್ತು ರಕ್ಷಣೆ;

14. ಗ್ರಾಮೀಣ ಪ್ರದೇಶಗಳಲ್ಲಿರುವ ನಿವೇಶನ, ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗಳ ಬಗ್ಗೆ ದಾಖಲಾತಿಗಳನ್ನು ಇಡುವುದು ;

15. ದನದ ದೊಡ್ಡಿಗಳ ಏರ್ಪಾಡು ;

16. ತಾಯಿ ಮತ್ತು ಮಕ್ಕಳ ಏಳಿಗೆ;

17. ಆಟೋಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ತರಬೇತು ;

18. ಯುವಕರ ಉತ್ಸಾಹವನ್ನು ಉತ್ಪಾದನಾ ಕಾರ್ಯಕ್ರಮಗಳ ಕಡೆ ತಿರುಗಿಸುವುದು ;

19. ಸರಕಾರ ಮತ್ತು ಜಿಲ್ಲಾ ಪರಿಷತ್ತಿನಿಂದ ವಹಿಸಬಹುದಾದ ಕಾರ್ಯಕ್ರಮಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಟ್ಟಿನಲ್ಲಿ ಮಂಡಳ ಪಂಚಾಯಿತಿಯಲ್ಲಿ ವಾಸಿಸುವ ಜನರ ಆರೋಗ್ಯ ರಕ್ಷಣೆ, ಶಿಕ್ಷಣ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ಇತರ ಸೌಕರ್ಯಗಳನ್ನು ಒದಗಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಮಂಡಳ ಪಂಚಾಯಿತಿಯ ಹೊಣೆ.

* * *

"ಮಂಡಳ ಪಂಚಾಯಿತಿಯ ಹೊಣೆ ತುಂಬಾ ಇದೆ. ಅದನ್ನು ವಿವರವಾಗಿ ಹೇಳಿದ್ದು ಒಳ್ಳೆಯದು. ಈ ಕೆಲಸಗಳನ್ನು ಮಾಡಲು ಪಂಚಾಯಿತಿಗೆ ಹಣ ಬೇಡವೆ?" ಕೇಳಿದ ನೀಲಪ್ಪ.

"ಸ್ವಾಮಿ, ತಮಗೆ ನಮಸ್ಕಾರ. ಒಳ್ಳೆಯ ವಿಷಯ. ಚೆನ್ನಾಗಿ ತಿಳಿಸುತ್ತಿದ್ದೀರಿ" ಎಂದ ರಂಗಪ್ಪ.

"ಗ್ರಾಮದ ಏಳಿಗೆಯೇ ದೇಶದ ಏಳಿಗೆ. ಆದ್ದರಿಂದ ಮಂಡಳ ಪಂಚಾಯಿತಿ ವಿಷಯ ಚೆನ್ನಾಗಿ ತಿಳಿಯಿರಿ. ನಿಮ್ಮ ಗ್ರಾಮದ ಏಳಿಗೆಗೆ ದುಡಿಯಿರಿ. ಅದು ನನ್ನ ಇಚ್ಛೆ" ಎಂದರು ಉಪಾಧ್ಯಾಯರು.

"ಹೌದು, ಹೌದು. ನಾವೆಲ್ಲರೂ ನಮ್ಮ ಹಳ್ಳಿಯ ಏಳಿಗೆಗೆ ದುಡಿಯುವೆವು" ಎಂಬ ಕೂಗು ಸಭೆಯಿಂದ ಕೇಳಿಬಂತು.

"ನೀವು ಉತ್ಸಾಹದಿಂದ ಕೇಳುತ್ತಿದ್ದೀರಿ. ನನಗೆ ಸಂತೋಷ. ಈಗ ನಾನು ಪಂಚಾಯಿತಿಯ ಆದಾಯದ ಮೂಲಗಳನ್ನು ತಿಳಿಸುವೆ."

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಡಳ ಪಂಚಾಯಿತಿಯ ವರಮಾನ

1. ಸರಕಾರ ಮತ್ತು ಜಿಲ್ಲಾ ಪರಿಷತ್ ನೀಡುವ ಅನುದಾನ ಮತ್ತು ಸಾಲ ;

2. ಸರಕಾರದ ಒಪ್ಪಿಗೆ ಪಡೆದು ಮಂಡಳ ಪಂಚಾಯಿತಿ ಎತ್ತುವ ಸಾಲ ;

3. ಮನೆ, ಮಾರುಕಟ್ಟೆ ಮತ್ತು ಮನರಂಜನ ಬಾಬು ಗಳಿಗೆ ಸಂಬಂಧಿಸಿದ ದಂಡ ;

4. ಮಂಡಳ ವ್ಯಾಪ್ತಿಯಲ್ಲಿ ಇರುವ ಆಸ್ತಿಪಾಸ್ತಿಗಳಿಂದ ಬರುವ ಹಣ ;

5. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಕರ್ನಾಟಕ ಖಾದಿ ಮತ್ತು ಗ್ರಾಮ ಕೈಗಾರಿಕಾ ಕಮಿಷನ್ ಮತ್ತು ಇತರ ಸಂಘಸಂಸ್ಥೆಗಳಿಂದ ಬರುವ ಹಣ ;

6. ಊರಿನ ಕಸಕಡ್ಡಿ ಮುಂತಾದ ವಸ್ತುಗಳನ್ನು ಮಾರುವುದರಿಂದ ಸಿಗುವ ಆದಾಯ ;

7. ಗ್ರಾಮಗಳಲ್ಲಿ ನಡೆಯುವ ಜಾತ್ರೆ, ಉತ್ಸವ ಮುಂತಾದ ಸಾಂಸ್ಕೃತಿಕ ಸಮಾರಂಭಗಳಿಗೆ ಹೊರಗಿನಿಂದ ಜನ ಬರುವರು. ಅವರಿಗೆ ನೀರು, ವಸತಿ ಮುಂತಾದ ಸೌಕರ್ಯ ಗಳನ್ನು ಏರ್ಪಡಿಸಬೇಕು. ಈ ಖರ್ಚು ಬಾಬುಗಳಿಗೆ ಹಣ ಬೇಡವೆ ? ಆದ್ದರಿಂದ ತಲಾ 50 ಪೈಸೆಯಂತೆ ಹೊರ ಗಿನವರಿಗೆ ತೆರಿಗೆ ಹಾಕಬಹುದು ;

8. ಈ ಕೆಳಗಿನ ಬಾಬುಗಳ ಮೇಲೆ ತೆರಿಗೆ ಹಾಕಬಹುದು

ಅ) ಮನರಂಜನ ತೆರಿಗೆ (ಸಿನಿಮಾಗಳ ಮೇಲೆ ಇಲ್ಲ) ;

Sri Vidyabharathi Book Centre, Sringeri

CC-O. In Public Domain. Digitized by eGangotri

ಆ) ವಾಹನಗಳ ಮೇಲೆ ತೆರಿಗೆ (ಮೋಟಾರ್ ವಾಹನಗಳ ಮೇಲೆ ಇಲ್ಲ) ;

ಇ) ಬಸ್ಸು ನಿಲ್ದಾಣಗಳ ಮೇಲೆ ತೆರಿಗೆ ; ಮಂಡಳ ಪಂಚಾಯಿತಿ ಬಸ್ಸಿನ ಪ್ರಯಾಣಿಕರಿಗೆ ಸೌಕರ್ಯಗಳನ್ನು ಬಸ್ಸು ನಿಲ್ದಾಣಗಳಲ್ಲಿ ಒದಗಿಸಬೇಕು. ಆಗ ಮಾತ್ರ ಜಿಲ್ಲಾ ಪರಿಷತ್ತಿನ ಅನುಮತಿ ಪಡೆದು ತೆರಿಗೆ ಹಾಕಬಹುದು ;

ಈ) ಗಾಡಿ ನಿಲ್ದಾಣಗಳ ಮೇಲೆ ತೆರಿಗೆ ;

ಉ) ಪಂಚಾಯಿತಿಗೆ ಸೇರಿದ ಹುಲ್ಲುಗಾವಲಿನಲ್ಲಿ ದನಗಳು ಮೇಯಲು ತೆರಿಗೆ ಹಾಕಬಹುದು ;

ಊ) ಮಂಡಳ ಪಂಚಾಯಿತಿ ಗ್ರಾಮಕ್ಕೆ ನೀರು ಸರಬರಾಜು ಮಾಡಿದಲ್ಲಿ ತೆರಿಗೆ.

ಪಂಚಾಯಿತಿ ವಿಧಿಸುವ ತೆರಿಗೆಯನ್ನು ಕಡಮೆ ಅಥವ ಹೆಚ್ಚು ಮಾಡುವ ಅಧಿಕಾರ ಸರಕಾರಕ್ಕೆ ಸೇರಿದ್ದು.

ಮಂಡಳ ಪಂಚಾಯಿತಿ ಆಡಳಿತ

ಮಂಡಳ ಪಂಚಾಯಿತಿಯ ಹಣಕಾಸಿನ ವ್ಯವಹಾರ ಮತ್ತು ಸಿಬ್ಬಂದಿ ವಿಚಾರ ಜಿಲ್ಲಾ ಪರಿಷತ್ತಿನ ಮೇಲ್ವಿಚಾರಣೆಗೆ ಒಳಪಟ್ಟಿದ್ದು. ಮಂಡಳ ಪಂಚಾಯಿತಿಯಲ್ಲಿ ಅಂಗೀಕೃತವಾದ ಆಯುವ್ಯಯ ಪಟ್ಟಿಯನ್ನು ಜಿಲ್ಲಾ ಪರಿಷತ್ತಿನ ಒಪ್ಪಿಗೆಗೆ ಕಳುಹಿಸತಕ್ಕದ್ದು.

ಮಂಡಳ ಪಂಚಾಯಿತಿಗೆ ಜಿಲ್ಲಾ ಪರಿಷತ್ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡುವುದು. ಆತ ಪೂರ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲದ ಅಧಿಕಾರಿ ಲೆಕ್ಕಪತ್ರಗಳನ್ನು ಇಡುವುದು ಆತನ ಹೊಣೆ. ಕಾರ್ಯದರ್ಶಿ ವಾರ್ಷಿಕ ಆಡಳಿತದ ವರದಿಯನ್ನು ಮತ್ತು ವಾರ್ಷಿಕ ಆಯುವ್ಯಯ ಪಟ್ಟಿಯನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸಬೇಕು.

ಸರಕಾರದ ಲೆಕ್ಕಪತ್ರಗಳ ತನಿಖೆ ಇಲಾಖೆ (ಆಡಿಟ್ ಇಲಾಖೆ) ಮಂಡಳ ಪಂಚಾಯಿತಿಯ ಲೆಕ್ಕ ತನಿಖೆ ಮಾಡುವುದು. ತನಿಖೆಯ ವರದಿಯನ್ನು ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ಕಳುಹಿಸಬೇಕು. ಜಿಲ್ಲಾ ಪರಿಷತ್ತಿಗೆ ಎರಡು ವಿಶೇಷ ಅಧಿಕಾರಗಳಿವೆ : 1. ಲೆಕ್ಕಪತ್ರದಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಬಹುದು. 2. ಕಾನೂನಿಗೆ ವಿರುದ್ಧವಾಗಿ ವೆಚ್ಚಮಾಡಿದಲ್ಲಿ ಅದನ್ನು ಕೈಬಿಡಬಹುದು.

ಮಂಡಳ ಪಂಚಾಯಿತಿ ತನಗೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಬಹುದು. ಆದರೆ ಅಂತಹ ಸಿಬ್ಬಂದಿಯ ಪಟ್ಟಿಯನ್ನು ಜಿಲ್ಲಾ ಪರಿಷತ್ತಿನ ಅವಗಾಹನೆಗೆ ಕಳುಹಿಸಬೇಕು. ಅವರ ಸಂಬಳ, ಭತ್ಯ ಮುಂತಾದುವುಗಳನ್ನು ಮಂಡಳ ಪಂಚಾಯಿತಿ ಕೊಡಬೇಕು.

ಮಂಡಳ ಪಂಚಾಯಿತಿಯನ್ನು ಬಲು ಪರಿಣಾಮಕಾರಿಯಾದ ಸಂಸ್ಥೆಯನ್ನಾಗಿ ಮಾಡುವ ಉದ್ದೇಶ ಇತ್ತು. ಏತನ್ಮಧ್ಯೆ ತಾಲ್ಲೂಕು ಪಂಚಾಯಿತಿ ವ್ಯವಸ್ಥೆ ಬಂದಿತು. ಅದರಿಂದ ಮಂಡಳ ಪಂಚಾಯಿತಿ ಮೂರನೆಯ ಸ್ಥಾನಕ್ಕೆ ಇಳಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯವಸಾಯ ಉತ್ಪಾದನಾ ಯೋಜನೆ, ತನ್ನ ಕ್ಷೇತ್ರದ ಏಳಿಗೆಗೆ ಯೋಜನೆ, ತಯಾರಿ, ಈ ಎರಡು ಮುಖ್ಯ ಜವಾಬ್ದಾರಿಗಳು ಮಂಡಳ ಪಂಚಾಯಿತಿಗೆ ಇವೆ. ಇದು ಒಂದು ರೀತಿಯಲ್ಲಿ ಹಿಂದಿನ (1959) ಕಾನೂನಿಗಿಂತ ಹೆಚ್ಚು ಪ್ರಭಾವಯುತ ಆಗಿದೆ. ಸಾಕಷ್ಟು ಹಣ ದೊರಕಿಸಿ ಕೊಟ್ಟಲ್ಲಿ ಮಂಡಳ ಪಂಚಾಯಿತಿಗಳು ಚೆನ್ನಾಗಿ ಕೆಲಸ ಮಾಡಿಯಾವು.

ಪ್ರಜಾತಂತ್ರದ ತಾಯಿಬೇರು ಪಂಚಾಯಿತಿ ರಾಜ್ಯ

"ಇಂದು ರಾಷ್ಟ್ರಮಟ್ಟದಿಂದ ಗ್ರಾಮೀಣಮಟ್ಟದವರೆಗೆ ಪ್ರಜೆಯೇ ಪ್ರಭು. ಆದರೆ ಅವರೇ ನೇರವಾಗಿ ಅಧಿಕಾರ ನಡೆಸಲು ಸಾಧ್ಯವಿಲ್ಲ. ಒಂದು ಕಾಲಕ್ಕೆ ಜನರೇ ರಾಜ್ಯದ ಕಾರ್ಯಕಲಾಪಗಳಲ್ಲಿ ನೇರವಾಗಿ ಭಾಗವಹಿಸಲು ಸಾಧ್ಯ ವಿತ್ತು. ಅದೂ ಒಂದೆರಡು ಕಡೆಗಳಲ್ಲಿ ಮಾತ್ರ. ಅಥೆನ್ಸ್ ಎಂಬುದು ಗ್ರೀಸ್ ದೇಶಕ್ಕೆ ಸೇರಿದ್ದು. ಅಲ್ಲಿ ಜನರೇ ನೇರ ವಾಗಿ ಆಡಳಿತ ವಿಚಾರದಲ್ಲಿ ಪಾಲುಗೊಳ್ಳುವುದು ಸಾಧ್ಯ ವಿತ್ತು. ಆದರೆ ಈಗ ಅಂಥ ವ್ಯವಸ್ಥೆ ಸಾಧ್ಯವಿಲ್ಲ. ಕಾರಣ ದೇಶ ದೊಡ್ಡದು. ಜನಸಂಖ್ಯೆ ಬಹಳ. ಆದ್ದರಿಂದ ನಮ್ಮ ಪರ ವಾಗಿ ಸರಕಾರ ನಡೆಸಲು ಯೋಗ್ಯರು ಬೇಕು; ಅವರು ದಕ್ಷರಾಗಿಯೂ, ಸತ್ಯವಂತರಾಗಿಯೂ ಇರಬೇಕು. ಅಷ್ಟೇ ಸಾಲದು. ನಿಃಸ್ವಾರ್ಥಸೇವೆ ಸಲ್ಲಿಸುವ ಮನೋಭಾವ ಹೊಂದಿರತಕ್ಕದ್ದು. ಈಗ ಆಯ್ಕೆ ಮಂಡಳ ಪಂಚಾಯಿತಿ ಯಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ನಡೆಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಂದ್ರ ಮತ್ತು ರಾಜ್ಯಗಳಲ್ಲಿ ಜನರಿಂದ ಆಯ್ಕೆ ಆದ ಸರಕಾರಗಳಿವೆ. ರಾಷ್ಟ್ರ ರಕ್ಷಣೆ, ಹಣಕಾಸು ವ್ಯವಹಾರ, ವಿದೇಶಗಳೊಡನೆ ಸಂಬಂಧ ಇವು ಕೇಂದ್ರಸರಕಾರಕ್ಕೆ ಸೇರಿದ್ದು. ಆರೋಗ್ಯ ಮತ್ತು ನೈರ್ಮಲ್ಯ, ನೀರು ಸರಬರಾಜು, ವಿದ್ಯುಚ್ಛಕ್ತಿ ಉತ್ಪಾದನೆ, ವಿತರಣೆ ಮುಂತಾದವು ರಾಜ್ಯ ಸರಕಾರಗಳ ಹೊಣೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಕಾರ್ಯಕ್ರಮಗಳನ್ನು ನಿರ್ವಹಿಸುವ ಬಗ್ಗೆ ನೀತಿ ನಿಯಮಗಳನ್ನು ರೂಪಿಸುತ್ತವೆ. ಈ ಚೌಕಟ್ಟಿನಲ್ಲಿ ಆಯಾ ಸ್ಥಳದ ಸನ್ನಿವೇಶ ಮತ್ತು ವಾತಾವರಣಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ನಡೆಸಬೇಕು. ಅದಕ್ಕಾಗಿ ಸ್ಥಳೀಯ ವಾತಾವರಣ ಮತ್ತು ಸಮಸ್ಯೆಗಳನ್ನು ತಿಳಿದ ಜನ ಬೇಡವೆ? ಈ ಕೆಲಸಗಳು ಸ್ಥಳೀಯ ಜನರಿಂದಲೇ ಸಾಧ್ಯ. ಸ್ಥಳೀಯ ಸರಕಾರ ಪ್ರಜಾಪ್ರಭುತ್ವದ ತಾಯಿಬೇರು. ತಾಯಿಬೇರು ಭದ್ರ ಆಗಿದ್ದರೆ ಇಡೀ ರಾಷ್ಟ್ರ ಸೌಖ್ಯ ಮತ್ತು ಸುಭದ್ರವಾಗಿ ಇದ್ದೀತು.

ನಗರ ಪ್ರದೇಶಗಳಲ್ಲಿ ಪುರಸಭೆ, ಕಾರ್ಪೊರೇಷನ್ ಮುಂತಾದ ಸ್ಥಳೀಯ ಸಂಸ್ಥೆಗಳಿವೆ. ಈ ಸಂಸ್ಥೆಗಳನ್ನು ನಡೆಸುವವರು ಆಯ್ಕೆ ಆದ ಜನತಾ ಪ್ರತಿನಿಧಿಗಳು. ಅಂತೆಯೇ ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯಿತಿ ರಾಜ್ಯ. ಪಂಚಾಯಿತಿ ರಾಜ್ಯ ನಮಗೆ ಹೊಸದಲ್ಲ. ಇದು ಪ್ರಾಚೀನ ಕಾಲದಿಂದಲೂ,ಅಂದರೆ ಬಹಳ ಹಿಂದಿನಿಂದ ನಡೆದುಬಂದಿದೆ.ಮಹಾಭಾರತದ ಕಾಲದಲ್ಲೂ ಸಹ ಗ್ರಾಮಪಂಚಾಯಿತಿ ವ್ಯವಸ್ಥೆ ತನ್ನದೆ ಆದ ರೀತಿಯಲ್ಲಿ ಇತ್ತು. ಹೊರಗಿನವರು ನಮ್ಮ ಪಂಚಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿತಿ ವ್ಯವಸ್ಥೆಯನ್ನು ಹೊಗಳಿದ್ದಾರೆ. ಗ್ರೀಕ್ ರಾಯಭಾರಿ ಮೆಗಾಸ್ತನೀಸ್. ಆತ ಇಲ್ಲಿಯ ಪಂಚಾಯಿತಿ ವ್ಯವಸ್ಥೆಯನ್ನು ಮನಸಾರ ಹೊಗಳಿರುವನು. ಈ ವ್ಯವಸ್ಥೆ ಬ್ರಿಟಿಷರ ಕಾಲದಲ್ಲಿ ಕುಸಿದುಬಿತ್ತು. ನ್ಯಾಯ ತೀರ್ಮಾನ ಮಾಡುವ ಜವಾಬ್ದಾರಿಯೂ ಆಯಾ ಪಂಚಾಯಿತಿಗಳಿಗೆ ಇತ್ತು.

ಪಂಚಾಯಿತಿ ರಾಜ್ಯ ಎಂದರೇನು? ಐದು ಮಂದಿ ಹಿರಿಯರು ಮತ್ತು ಅನುಭವಿಗಳು ಕೂಡಿ ನಡೆಸುವ ಅಧಿಕಾರ. ಪಂಚಾಯಿತಿ ರಾಜ್ಯ ರಾಮರಾಜ್ಯ ಸ್ಥಾಪನೆಗೆ ಬುನಾದಿ ಎಂಬುದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಅಭಿಪ್ರಾಯ. ಆದ್ದರಿಂದ ಸ್ವಾತಂತ್ರ್ಯಾನಂತರ ಪಂಚಾಯಿತಿರಾಜ್ಯ ವ್ಯವಸ್ಥೆಗೆ ಹೊಸ ಚೈತನ್ಯ ತುಂಬುವ ವ್ಯವಸ್ಥೆ ನಡೆದಿದೆ. ಈ ವ್ಯವಸ್ಥೆಯಿಂದ ಬಹಳ ಅನುಕೂಲ. ಸ್ಥಳೀಯ ಸಮಸ್ಯೆಗಳನ್ನು ಅರಿತವರು ಸೇವೆ ಸಲ್ಲಿಸಲು ಅವಕಾಶ ಇದೆ. ಆದ್ದರಿಂದ ಗ್ರಾಮೀಣ ಮಟ್ಟದಲ್ಲಿ ನಾಯಕತ್ವ ಹುಟ್ಟಿ ಬೆಳೆಯಬಹುದು. ಸ್ಥಳೀಯರ ಉತ್ಸಾಹ ಕ್ರೋಡೀಕರಿಸಿದಲ್ಲಿ ಕಾರ್ಯಕ್ರಮದ ಮೇಲಿನ ಖರ್ಚು ಉಳಿಯಲು ಅಥವಾ ಕಡಮೆ ಆಗಲು ಸಾಧ್ಯ. ಸ್ಥಳೀಯ ಸರಕಾರ ಯಶಸ್ವಿಯಾಗಿ ನಡೆದಲ್ಲಿ ಸರಕಾರದ ಆಡಳಿತದ ಭಾರ ಸ್ವಲ್ಪ ಹಗುರ ಆಗಬಹುದು. ನಿರೀಕ್ಷಿಸಿದಂತೆ ಅಧಿಕಾರ ಗ್ರಾಮೀಣ ಮಟ್ಟಕ್ಕೆ ಇಳಿಯುವುದು. ಎಲ್ಲಕ್ಕಿಂತ ಮೇಲಾಗಿ ರಾಜಕೀಯ ವಿಚಾರದಲ್ಲಿ ಹಳ್ಳಿಗರಿಗೆ ತಿಳಿವಳಿಕೆ ಮೂಡುವುದು.

Sri Vidyabharathi Book Centre, Sringeri

ಈ ಹೊಣೆಯನ್ನು ಹೊರಲು ಜನ ಓದುಬರಹ ಕಲಿತು

CC-O. In Public Domain. Digitized by eGangotri

ವಿದ್ಯಾವಂತರಾಗಬೇಕು. ಗ್ರಾಮೀಣರಿಗೆ ಪಂಚಾಯಿತಿ ಆಡಳಿತ ನಡೆಸಲು ಸರಕಾರ ತರಬೇತಿ ನೀಡುವುದು ಅಗತ್ಯ. ಅಷ್ಟೇ ಅಲ್ಲ, ಕಾಲಕಾಲಕ್ಕೆ ಅವರಿಗೆ ಸೂಕ್ತ ತಿಳಿವಳಿಕೆ, ನಿರ್ದೇಶನ ಮತ್ತು ಸಾಕಷ್ಟು ಹಣ ನೀಡುವುದು ಅನಿವಾರ್ಯ. ಆಗ ಮಾತ್ರ ಪಂಚಾಯಿತಿ ರಾಜ್ಯ ವ್ಯವಸ್ಥಿತವಾಗಿ ನಡೆಯುವುದು. ಅದರಿಂದ ಜನತೆಯ ಕಲ್ಯಾಣ ಸಾಧನೆ ಆಗಿ ಸುಖೀರಾಜ್ಯ ಆಗಲಿದೆ. ಒಟ್ಟಿನಲ್ಲಿ ಪಂಚಾಯಿತಿ ರಾಜ್ಯ ಪ್ರಜಾತಂತ್ರದ ತಾಯಿಬೇರು.

ನಾನು ಇದುವರೆಗೆ ಪಂಚಾಯಿತಿ ರಾಜ್ಯದ ವಿಚಾರ ತಿಳಿಸಿದ್ದೇನೆ. ಮಂಡಳ ಪಂಚಾಯಿತಿ, ತಾಲ್ಲೋಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳ ಬಗ್ಗೆ ತಿಳಿಸಿದ್ದೇನೆ. ತಾವೂ ಸಹ ಗಮನವಿಟ್ಟು ಕೇಳಿದ್ದೀರಿ. ನನ್ನ ಶ್ರಮ ಸಾರ್ಥಕ ಆಯಿತು. ನಿಮಗೆ ವಂದನೆಗಳು" ಎಂದು ಹೇಳಿ ಉಪಾಧ್ಯಾಯರು ಕುಳಿತರು.

ಈರಯ್ಯ ಸಭೆಯಿಂದ ಎದ್ದು ಬಂದು ಹೀಗೆ ಹೇಳಿದ: "ನಾವು ಹಳ್ಳಿಗರು, ನಮಗೆ ಪಂಚಾಯಿತಿ ಚುನಾವಣೆಯಲ್ಲಿ ಮತ ಕೊಡುವುದು ಮಾತ್ರ ಗೊತ್ತಿತ್ತು. ಬಾಕಿವಿಚಾರಗಳು ತಿಳಿದಿರಲಿಲ್ಲ. ಈಗ ಪಂಚಾಯಿತಿ ರಾಜ್ಯದ ಬಗ್ಗೆ ತಿಳಿದಿದ್ದೇವೆ. ಮುಂದೆ ಅದರ ಯಶಸ್ಸಿಗೆ ನಾವು ಕೆಲಸ ಮಾಡುತ್ತೇವೆ."

ಉಪಾಧ್ಯಾಯರಿಗೆ ಹಾರ ಹಾಕಿದರು. ಸಭೆಯಲ್ಲಿ ಚಪ್ಪಾಳೆ ಮೊಳಗಿತು.

ಜೈ ಭಾರತ! ಪಂಚಾಯಿತಿ ರಾಜ್ಯಕ್ಕೆ ಜಯವಾಗಲಿ!!

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಪ್ರಕಾಶಕರಿಂದ ವಯಸ್ಕರ ಶಿಕ್ಷಣ ಕುರಿತು ರಚನೆಯಾಗಿರುವ ಪುಸ್ತಕಗಳು

1 'ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ' (ಕೆ. ಬಸವಯ್ಯ ಅವರೊಡನೆ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1972

2 'ಸಾಕ್ಷರತಾ ಸಾಹಿತ್ಯ ಸೂತ್ರಗಳು', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1972

3 'ಜನತಾ ಶಾಲೆಗಳು', ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1973

4 'ನಿರಕ್ಷರತೆ ಮತ್ತು ಅದರ ನಿವಾರಣೆ' (ಸಿ. ಕೃಷ್ಣ ಅವರೊಡನೆ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974

5 'ವಯಸ್ಕರ ಶಿಕ್ಷಣ', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1975

6 'ವಯಸ್ಕರ ಶಿಕ್ಷಣ ಸಾಧನೆ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1977

7 'ಭಾರತದ ಗ್ರಾಮೀಣ ಗ್ರಂಥಾಲಯಗಳು', ಲೇಖಕರು, 2904, ಚಾಮುಂಡಿಪುರಂ, ಮೈಸೂರು 4, 1977 (ಕರ್ನಾಟಕ ಸಾಹಿತ್ಯ ಅಕಾದೆಮಿಯಿಂದ ಬಹುಮಾನಿತ)

8 'ಅನೌಪಚಾರಿಕ ಶಿಕ್ಷಣ' (ಎ. ಕೃಷ್ಣಮೂರ್ತಿ ಅವರೊಡನೆ), ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, 1977

9 'ವಿಶ್ವದ ವಯಸ್ಕರ ಶಿಕ್ಷಣ ದೂತರು', ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, 1977

10 'ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸಿದ ಮೂರು ಮಹಿಳಾ ಮಣಿಗಳು', ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1978

11 'ಮನೆಗೊಂದು ಪುಸ್ತಕ ಭಂಡಾರ', ಹೇಮಂತ ಸಾಹಿತ್ಯ, ಬೆಂಗಳೂರು, 1978

12 'ವಯಸ್ಕರ ಶಿಕ್ಷಣ ಕೈಪಿಡಿ', ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, 1979, 1980 (ಮೈಸೂರು ವಿಶ್ವ ವಿದ್ಯಾನಿಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾದೆಮಿಯಿಂದ ಬಹುಮಾನಿತ)

Sri Vidyabharathi Book Centre, Sringeri

CC-O. In Public Domain. Digitized by eGangotri

13 'ವಯಸ್ಕರ ಶಿಕ್ಷಣ ಹಾಗೂ ಸಾಹಿತ್ಯ ರಚನೆ', ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, 1979-1980

14 'ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ', ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು 1980-1984

15 'ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ', ಶಿಕ್ಷಕ / ಕಾರ್ಯಕರ್ತರ ಕೈಪಿಡಿ; ಗೀತಾ ಬುಕ್ ಹೌಸ್, ಮೈಸೂರು, 1981, ಎರಡನೆಯ ಮುದ್ರಣ: ಡಾ|| ಎನ್. ಎ. ತೀರ್ಥಸ್ಮಾರಕ ಶೈಕ್ಷಣಿಕ ಅಧ್ಯಯನ ಕೇಂದ್ರ, ಬೆಂಗಳೂರು-1984

16 ವಯಸ್ಕರ ಶಿಕ್ಷಣ, ಜಾಗತಿಕ ಚಳುವಳಿ ಮತ್ತು ಭಾರತದಲ್ಲಿ ವಯಸ್ಕರ ಶಿಕ್ಷಣ. ಗೀತಾ ಬುಕ್ ಹೌಸ್, ಮೈಸೂರು 1986

17 ವಯಸ್ಕರ ಶಿಕ್ಷಣ ದರ್ಶನ, ಗ್ರಾಮವಿಕಾಸ ಪತಿಷ್ಠಾನ: ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು, 1986

18 *Literature for Neoliterates*, Central Institute of Indian Languages, Mysore 1981

ಭಾರತ ಸರಕಾರದಿಂದ ಪುರಸ್ಕೃತವಾದ ನವಸಾಕ್ಷರರ ಸಾಹಿತ್ಯ

19	ಕಾಷ್ಠವ್ಯಸನ(ಉರುವಲ ಸಮಸ್ಯೆ):	ಟಿ. ಎನ್. ಮಹಾಲಕ್ಷ್ಮಿ	4 00
20	ಬ್ಯಾಂಕುಗಳು ನಮಗಾಗಿ :	ಎನ್. ನರಸಮ್ಮ	5 00

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂರೂ ಹಂತಗಳಲ್ಲೂ ಸ್ವಯಂ ಆಡಳಿತ ನಡೆಸಬಲ್ಲ ಸಂಪೂರ್ಣ ಅಧಿಕೃತ ಸಂಸ್ಥೆಗಳು ಇದ್ದ ಹೊರತು ಅವುಗಳ ಕಾರ್ಯನಿರ್ವಹಣೆ ಪರಿಣಾಮಕಾರಿ ಆಗಲಾರದು. ಈ ದೃಷ್ಟಿಯಿಂದ ರಾಜ್ಯ ಸರಕಾರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ಮಂಡಳ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳ ವಿಧೇಯಕವನ್ನು ಜಾರಿಗೆ ತಂದಿದೆ. ಈ ಕ್ರಾಂತಿಕಾರಕ ವಿಧೇಯಕ ಗ್ರಾಮಾಂತರ ಪ್ರದೇಶದ ಜನರಿಗೆ ತಮ್ಮನ್ನು ತಾವೇ ಆಳಿಕೊಳ್ಳುವ ಅಧಿಕಾರವನ್ನು ನೀಡಿದೆ. ಹೊಸದಾಗಿ ದತ್ತವಾಗಿರುವ ಹೊಣೆಯನ್ನು ಹೊರಲು ಜನತೆ ವಿಧೇಯಕದ ಪೂರ್ಣವಿವರಗಳನ್ನು ತಿಳಿಯುವುದು ಅನಿವಾರ್ಯ. ಲೇಖಕರು ವಿಧೇಯಕದ ಪೂರ್ಣ ವಿವರಣೆಗಳನ್ನು ಸರಳವಾದ ಭಾಷೆಯಲ್ಲಿ ಮನಮುಟ್ಟುವಂತೆ ಈ ಪುಸ್ತಕದಲ್ಲಿ ತಿಳಿಸಿದ್ದಾರೆ. ಅವರ ಶ್ರಮ ಸಾರ್ಥಕವಾಗಲಿ.

ಜಮ್ನಾಲಾಲ್ ಬಜಾಜ್ ಪ್ರಶಸ್ತಿ ವಿಜೇತ
ಧನ್ಯಜೀವಿ ಕರ್ಮಯೋಗಿ
ತಗಡೂರು ರಾಮಚಂದ್ರರಾವ್

ಜುಲೈ 28, 1986
ಮೈಸೂರು

ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ಮಸೂದೆ ಈಗಾಗಲೇ ಜಾರಿಗೆ ಬಂದಿದೆ....... ಇಂತಹ ಸಂದರ್ಭದಲ್ಲಿ ಸಾಮಾನ್ಯ ಅಕ್ಷರಸ್ಥ ಸಹ ಸುಲಭವಾಗಿ ಗ್ರಹಿಸಬಲ್ಲಂತೆ ಟಿ. ಎನ್. ಮಂಜುನಾಥ್‌ರವರ "ಮಂಡಳ ಪಂಚಾಯಿತಿ ಮತ್ತು "ಜಿಲ್ಲಾ ಪರಿಷತ್ತು" ಎಂಬ ಕಿರುಪುಸ್ತಕವೊಂದನ್ನು ಬರೆದಿರುವುದು ಶ್ಲಾಘನೀಯ ಕಾರ್ಯ. ಮಸೂದೆಯ ತಾತ್ವಿಕ ಹಿನ್ನೆಲೆಯನ್ನು ಹಾಗೂ ಕಾನೂನಿನ ಮುಖ್ಯ ಅಂಶಗಳನ್ನೂ ಸಂಕ್ಷೇಪವಾಗಿ ವಿವರಿಸಿದ್ದಾರೆ. ಮಸೂದೆಯ ಪೂರ್ಣ ವಿವರಗಳನ್ನು ಸರಳವಾದ ಭಾಷೆಯಲ್ಲಿ ಶ್ರಮವಹಿಸಿ ಬರೆದಿದ್ದಾರೆ. ಯಾರಿಗೇ ಆದರೂ ಇದನ್ನು ಓದುವುದು ಸುಲಭ ಹಾಗೂ ಲಾಭದಾಯಕವಾಗಿದೆ.

ಆಗಸ್ಟ್ 5, 1986 ‘ಆರತಿ’ ಪತ್ರಿಕೆ
ಮೈಸೂರು

.... ಅಸ್ತಿತ್ವಕ್ಕೆ ಬರಲಿರುವ ಮೂರು ಹಂತದ ಸ್ಥಳೀಯ ಸಂಸ್ಥೆಗಳ ಪರಿಚಯವನ್ನು ಕಥೆಯ ರೂಪದಲ್ಲಿ ವಿವರಿಸಿದ್ದಾರೆ.

ಗ್ರಾಮಸಭೆಯ ರಚನೆ, ಹೊಣೆಗಾರಿಕೆ, ಮಂಡಳ ಪಂಚಾಯಿತಿ ರಚನೆ, ನ್ಯಾಯ ಪಂಚಾಯಿತಿ ವ್ಯವಸ್ಥೆ, ತಾಲ್ಲೂಕು ಪಂಚಾಯಿತಿ ಸಮಿತಿ, ಜಿಲ್ಲಾ ಪರಿಷತ್ ರಚನೆ, ಸದಸ್ಯತ್ವ, ಚುನಾವಣೆ, ಮಂಡಳ ಪಂಚಾಯಿತಿಯ ಅಧಿಕಾರ ಮತ್ತು ಕರ್ತವ್ಯ, ಸಾರ್ವಜನಿಕ ಕಾಮಗಾರಿಗಳು ಮತ್ತಿತರ ವಿವರಗಳನ್ನು ಲೇಖಕರು ಉಪಾಧ್ಯಾಯರ ಬಾಯಲ್ಲಿ ಸರಳ ಭಾಷೆಯಲ್ಲಿ ಹೇಳಿಸಿದ್ದಾರೆ.......

ಗ್ರಾಮೀಣ ಜನರು ಅದರಲ್ಲೂ ನವ ಅಕ್ಷರಸ್ಥರಿಗೂ ಸುಲಭವಾಗುವಂತೆ ಸರಳ ಭಾಷೆ ಮತ್ತು 16 ಪಾಯಿಂಟ್ ಅಕ್ಷರಗಳಲ್ಲಿ ಅಚ್ಚುಮಾಡಲಾಗಿದೆ.

ಬರಲಿರುವ ಜಿಲ್ಲಾ ಪರಿಷತ್ ಚುನಾವಣೆ ದೃಷ್ಟಿಯಿಂದ ಈ ಪುಸ್ತಕ ಸಕಾಲಿಕವಾಗಿದೆ ಮತ್ತು ಉಪಯುಕ್ತವಾಗಿದೆ.

Sri Vidyabharathi Book Centre, Sringeri

ಆಗಸ್ಟ್ 5, 1986 ‘ನವಧ್ವನಿ’ ಪತ್ರಿಕೆ
ಮೈಸೂರು

ಅಭಿಪ್ರಾಯಗಳು

CC-O. In Public Domain. Digitized by eGangotri

ಗ್ರಾಮೀಣ ಜನತೆ ಕಾನೂನನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ತಾವು "ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್" ಎಂಬ ಪುಸ್ತಕ ಪ್ರಕಟಿಸಿರುವುದನ್ನು ಓದಿ ಸಂತೋಷವಾಯಿತು.

ಆಗಸ್ಟ್ 25, 1986
ಬೆಂಗಳೂರು

ರಾಮಕೃಷ್ಣ ಹೆಗಡೆ
ಮುಖ್ಯಮಂತ್ರಿ, ಕರ್ನಾಟಕ ಸರಕಾರ

ಡಾ॥ ಟಿ. ಎನ್. ಮಂಜುನಾಥ್ ಅವರು ಈ ಪುಟ್ಟ ಪುಸ್ತಕ ಬರೆದು ದೊಡ್ಡ ಉಪಕಾರ ಮಾಡಿದ್ದಾರೆ. ಪಂಚಾಯಿತಿ ರಾಜ್ಯದ ತಾತ್ವಿಕ ಹಿನ್ನೆಲೆ ನೀಡಿದ್ದಾರೆ. ಜನಕ್ಕೆ ಅಧಿಕಾರ ಹಂಚುವ ಕರ್ನಾಟಕದ ಜಿಲ್ಲಾ ಪರಿಷತ್ ಮತ್ತು ಮಂಡಲದ ಪಂಚಾಯಿತಿ ಕಾನೂನಿನ ಮುಖ್ಯ ಅಂಶಗಳನ್ನು ಸಂಕ್ಷೇಪವಾಗಿ ವಿವರಿಸಿದ್ದಾರೆ. ಬರಹ ಸರಳವೂ, ಅರ್ಥಪೂರ್ಣವೂ ಆಗಿದೆ. ಕನ್ನಡದ ಜನರು ಇದನ್ನು ಓದಿ ಪ್ರಯೋಜನ ಪಡೆಯಲೆಂದು ಆಶಿಸುತ್ತೇನೆ.

ಜುಲೈ 25, 1986
ಮೈಸೂರು

ಬಿ. ಆರ್. ಪ್ರಾಣೇಶರಾವ್
ಅಧ್ಯಕ್ಷರು, ಗಾಂಧಿ ಅಧ್ಯಯನ ಸಂಸ್ಥೆ

ಡಾ॥ ಟಿ. ಎನ್. ಮಂಜುನಾಥ್‌ರವರ ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಪುಸ್ತಕವು ಈ ವಿಷಯಕ್ಕೆ ಒಂದು ಉತ್ತಮ ಪರಿಚಯ ಸಾಧನ. ಭಾರತದಲ್ಲಿ ಪಂಚಾಯಿತಿ ರಾಜ್ಯದ ಹಿನ್ನೆಲೆ ಮತ್ತು ಕರ್ನಾಟಕದಲ್ಲಿ ಇಂದಿನ, ಅಂದರೆ 1985ನೇ ಇಸವಿ ಆಗಸ್ಟ್ 14ರಿಂದ ಜಾರಿಯಲ್ಲಿರುವ ಪಂಚಾಯಿತಿ ರಾಜ್ಯ ವ್ಯವಸ್ಥೆಯ ರೂಪರೇಶೆಗಳನ್ನು ಗ್ರಾಮೀಣ ಜನರ ತಿಳಿವಳಿಕೆಗಾಗಿ ಕೊಡಲಾಗಿದೆ. ಮುಖ್ಯಾಂಶಗಳನ್ನು ಬಿಡದೆ ತಿಳಿಸಲಾಗಿದೆ. ಆಸಕ್ತಿ ಹುಟ್ಟಿಸುವ ಸಚಿತ್ರ ವಿವರಣೆ ಇಲ್ಲಿದೆ. ಖಂಡಿತವಾಗಿಯೂ ಗ್ರಾಮಸ್ಥರಿಗೆ ಇದನ್ನು ಓದಿ ತಿಳಿಯುವುದು ಲಾಭದಾಯಕ. ಪಂಚಾಯಿತಿ ರಾಜ್ಯದ ನವರಚನೆಯ ಈ ಕಾಲದಲ್ಲಿ ಡಾ॥ ಮಂಜುನಾಥ್‌ರ ಈ ಸಕಾಲಿಕ ಪ್ರಯತ್ನ ಅಭಿನಂದನೀಯ.

ಡಾ॥ ಎಂ. ಉಮಾಪತಿ
ಹಿರಿಯ ಅಧ್ಯಾಪಕ
ರಾಜ್ಯಶಾಸ್ತ್ರ ಇಲಾಖೆ, ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು 570006

ಜುಲೈ 25, 1986
ಮೈಸೂರು

ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ರೂ. 5.00

Sri Vidyabharathi Book Centre, Sringeri